
ರೇಖಾ ರಾಮಾಯಣ

ದೇವನಹಳ್ಳಿ ಚೆನ್ನಕೇಶವ ಆಚಾರ್ಯರ ರೇಖಾಚಿತ್ರಗಳು

ಸಂಪುಟ ೩

ಕೆ.ವಿ. ಸುಬ್ರಹ್ಮಣ್ಯಂ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

ರೇಖಾ ರಾಮಾಯಣ

ದೇವನಹಳ್ಳಿ ಚೆನ್ನಕೇಶವ ಆಚಾರ್ಯರ ರೇಖಾಚಿತ್ರಗಳು

ಸಂಪುಟ–೩

ಕೆ.ವಿ. ಸುಬ್ರಹ್ಮಣ್ಯಂ

ಪ್ರಧಾನ ಸಂಪಾದಕರು
ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ

ಕರ್ನಾಟಕ
ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು ೫೬೦ ೦೦೨

REKHA RAMAYANA
A collection of drawings of Devanahalli Chennakeshava Acharya. Volume-3
Text and Notes Written and Drawings. Edited by : **K.V. Subramanyam**, Bengaluru-26
Mob : 9742622486
Chief Editor : **Mahadevappa Shambhulingappa Shilpi**

First Edition : 2016

Pages : viii + 112 = 120
Price : **100/-**
Used Paper : 80 GSM NS Book Printing
Copies : 1000

Published by
Indramma H.V.
Registrar, Karnataka Shilpakala Academy, Kannada Bhavana
J.C. Road, Bengaluru - 560 002, Ph.: 080-22278725
Email: shilpakala.academy@gmail.com
Web : www.karnatakashilpakalaacademy.org

Printed at
Sri Ujwal Enterprises
N0.10, 12th Cross, Park Main Road
Srinagar, Bengaluru-560 050
Mob.: 9448112048

ರೇಖಾ ರಾಮಾಯಣ
ದೇವನಹಳ್ಳಿ ಚೆನ್ನಕೇಶವ ಆಚಾರ್ಯ ಅವರ ಚಿತ್ರಗಳ ಸಂಪುಟ-೩
ಪಠ್ಯ ಮತ್ತು ಟಿಪ್ಪಣಿಗಳು ಹಾಗೂ ಚಿತ್ರಗಳ ಸಂಪಾದನೆ: **ಕೆ.ವಿ. ಸುಬ್ರಹ್ಮಣ್ಯಂ**
ಮೊ.: ೯೭೪೨೬೨೨೪೮೬
ಪ್ರಧಾನ ಸಂಪಾದಕರು: **ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ**

ಮೊದಲ ಮುದ್ರಣ : ೨೦೧೬
ಪುಟಗಳು : viii + ೧೧೨ = ೧೨೦
ಬೆಲೆ : ೧೦೦/-
ಪ್ರತಿಗಳು : ೧೦೦೦

ಬಳಸಿದ ಕಾಗದ : ೮೦ ಜಿಎಸ್‌ಎಂ ಎನ್‌ಎಸ್ ಬುಕ್ ಪ್ರಿಂಟಿಂಗ್

ಪ್ರಕಾಶಕರು
ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ ಕನ್ನಡ ಭವನ
ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨

ಮುದ್ರಣ
ಉಜ್ವಲ್ ಎಂಟರ್‌ಪ್ರೈಸಸ್
ನಂ. 10, 12ನೇ ಅಡ್ಡರಸ್ತೆ, ಪಾರ್ಕ್ ಮುಖ್ಯರಸ್ತೆ
ಶ್ರೀನಗರ, ಬೆಂಗಳೂರು-560 050
ಮೊ : 9448112048

ಅಧ್ಯಕ್ಷರ ನುಡಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಪ್ರಸ್ತುತದಲ್ಲಿ ಬಹು ಪುರಾತನವಾದ ದೇವನಹಳ್ಳಿಯ ದಿ. ಶಿಲ್ಪಿ ಶ್ರೀ ಚನ್ನಕೇಶವಾಚಾರ್ಯರು ಸಂಗ್ರಹಿಸಿರುವ ದೇವತಾದಿಚಿತ್ರಸಾರ ಸಂಗ್ರಹ ಎಂಬ ರೇಖಾಚಿತ್ರಗಳ ಪುಸ್ತಕವನ್ನು ನಮ್ಮ ಕಲಾ ಸಾಂಸ್ಕೃತಿಕ ಸಂಪತ್ತನ್ನು ಉಳಿಸುವ ಉದ್ದೇಶದಿಂದ ಮೂಲ ಹಸ್ತ ಪ್ರತಿಗಳನ್ನು ಪಡೆದು ಅದನ್ನು ಸಂಪಾದಕರಾದ ಶ್ರೀ ಕೆ.ವಿ.ಸುಬ್ರಮಣ್ಯಂ ಅವರಿಗೆ ವಹಿಸಿ ರೇಖಾಚಿತ್ರಗಳನ್ನು ಮೂರು ಸಂಪುಟಗಳಲ್ಲಿ ಮುದ್ರಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವುದು ಮೊದಲ ಆದ್ಯತೆ ಆಗಿದ್ದು ಅದರಂತೆ ಈಗಾಗಲೇ ಶಿವಶಕ್ತಿ, ಮಹಾ ವಿಷ್ಣುನಿಧಿ ಎಂಬ ಎರಡು ಸಂಪುಟಗಳನ್ನು ಮುದ್ರಿಸಿದ್ದು, ಈಗ ಮೂರನೇ ಸಂಪುಟವಾದ ರೇಖಾ ರಾಮಾಯಣ ಮುದ್ರಣವಾಗುತ್ತಿದೆ. ರೇಖಾಚಿತ್ರಗಳಿರುವ ಪುಸ್ತಕಗಳಿಗೆ ಬೇಡಿಕೆ ದಿನೇ ದಿನೇ ವಿದ್ಯಾರ್ಥಿಗಳಿಂದ, ಕಲಾಸಕ್ತರಿಂದ, ಸಾರ್ವಜನಿಕರಿಂದ ಹೆಚ್ಚಾಗುತ್ತಿರುವುದನ್ನು ಕಂಡು ಶ್ರೇಷ್ಠವಾದ ರೇಖಾಚಿತ್ರಗಳ ಪುಸ್ತಕದ ಕೊರತೆ ಕಾಡುತ್ತಿದೆ ಎಂದು ಮನಗೊಂಡು, ಇಂತಹ ಅಪರೂಪದ ರೇಖಾಚಿತ್ರಗಳ ಪುಸ್ತಕವನ್ನು ಮೂರು ಸಂಪುಟಗಳಲ್ಲಿ ಮುದ್ರಿಸಲಾಗುತ್ತಿದೆ.

ಸದರಿ ರೇಖಾಚಿತ್ರಗಳ ಪುಸ್ತಕವನ್ನು ಶ್ರೀ ಕೆ.ವಿ. ಸುಬ್ರಮಣ್ಯಂ ಅವರು ಬಹಳ ಸುಂದರವಾಗಿ ಮೂರು ಸಂಪುಟಗಳಲ್ಲಿ ಹೊರತರಲು ಸಾಕಷು ಶ್ರಮಿಸಿರುತ್ತಾರೆ. ಅದರ ಅಂತಿಮ ಫಲವಾಗಿ ಮೂರನೇ ಸಂಪುಟವಾಗಿ ರೇಖಾ ರಾಮಾಯಣ ಸಂಪುಟವು ಹೊರಬರುತ್ತಿದೆ. ಸುಮಾರು ೧೨೦ವರ್ಷದ ಹಿಂದೆ ದಿ. ಶಿಲ್ಪಿ ಶ್ರೀ ಚನ್ನಕೇಶವಾಚಾರ್ಯರು ಸಂಪಾದಿಸಿರುವ ರೇಖಾಚಿತ್ರಗಳು ಶಿಲ್ಪಕಲೆಯ ಸಂಪ್ರದಾಯ, ಪಾರಂಪರಿಕ ವೈಶಿಷ್ಟ್ಯತೆ, ಕಲೆಯ ಸಂಸ್ಕೃತಿ ಮುಂತಾದವುಗಳನ್ನು ಬಿಂಬಿಸುವ ರೀತಿಯಲ್ಲಿವೆ. ಇದನ್ನು ಇಂದಿಗೂ ಕಾಪಾಡಿಕೊಂಡು ಬರುತ್ತಿರುವುದು ನಿಜಕ್ಕೂ ಸ್ವಾಗತಾರ್ಹ. ಇಂತಹ ಪುರಾತನ ಅಪರೂಪದ ರೇಖಾಚಿತ್ರದ ಪುಸ್ತಕವನ್ನು ನನ್ನ ಅಧಿಕಾರಾವಧಿಯಲ್ಲಿ ಮೂರು ಸಂಪುಟಗಳಲ್ಲಿ ಮುದ್ರಿಸುತ್ತಿರುವುದಕ್ಕೆ ಹೆಮ್ಮೆಯೆನಿಸುತ್ತದೆ. ನನಗೆ ಪುಸ್ತಕ ಮುದ್ರಿಸಲು ಹಸ್ತಪ್ರತಿ ನೀಡಿ ಸಹಕರಿಸಿದ ದಿ. ಶಿಲ್ಪಿ ಶ್ರೀ ಎ.ಸಿ. ಹನುಮಂತಾಚಾರ್ಯರ ಧರ್ಮಪತ್ನಿಯವರಾದ ಶ್ರೀಮತಿ ಸರೋಜಾದೇವಿ ಆಚಾರ್ಯ ಹಾಗೂ ಅವರ ಮಕ್ಕಳಿಗೆ ಮತ್ತು ಶಿಲ್ಪಕಲಾ ಟ್ರಸ್ಟ್, ದೇವನಹಳ್ಳಿಯ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. 'ಶಿವಶಕ್ತಿ', 'ಮಹಾ ವಿಷ್ಣುನಿಧಿ', 'ರೇಖಾ ರಾಮಾಯಣ' ಎಂಬ ರೇಖಾಚಿತ್ರ ಪುಸ್ತಕಗಳ ಮೂರು ಸಂಪುಟದ ಸಂಪಾದಕರಾಗಿರುವ ಶ್ರೀ ಕೆ.ವಿ.ಸುಬ್ರಮಣ್ಯಂ ಅವರಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಈ ಪುಸ್ತಕದ ಮೂರು ಸಂಪುಟಗಳ ಮುದ್ರಣಕ್ಕೆ ಸಹಕರಿಸಿದ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ವೆಂಕಟಾಚಲಪತಿ ಅವರಿಗೂ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀಮತಿ ಇಂದ್ರಮ್ಮ. ಹೆಚ್.ವಿ. ಅವರಿಗೂ ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಉಜ್ವಲ್ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ
ಅಧ್ಯಕ್ಷರು
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಪ್ರಕಾಶಕರ ನುಡಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಪ್ರಸ್ತುತದಲ್ಲಿ ಬಹು ಪುರಾತನವಾದ ದೇವನಹಳ್ಳಿಯ ದಿ. ಶಿಲ್ಪಿ ಶ್ರೀ ಚನ್ನಕೇಶವಾಚಾರ್ಯರು ಸಂಗ್ರಹಿಸಿರುವ ದೇವತಾದಿಚಿತ್ರಸಾರ ಸಂಗ್ರಹ ಎಂಬ ರೇಖಾಚಿತ್ರಗಳ ಪುಸ್ತಕವನ್ನು ನಮ್ಮ ಕಲಾ ಸಾಂಸ್ಕೃತಿಕ ಸಂಪತ್ತನ್ನು ಉಳಿಸುವ ಉದ್ದೇಶದಿಂದ ಮೂಲ ಹಸ್ತ ಪ್ರತಿಗಳನ್ನು ಪಡೆದು ಅದನ್ನು ಸಂಪಾದಕರಾದ ಶ್ರೀ ಕೆ.ವಿ.ಸುಬ್ರಮಣ್ಯಂ ಅವರಿಗೆ ವಹಿಸಿ ರೇಖಾಚಿತ್ರಗಳನ್ನು ಮೂರು ಸಂಪುಟಗಳಲ್ಲಿ ಮುದ್ರಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗುತ್ತಿದೆ. ಅದರ ಅಂತಿಮ ಪುಸ್ತಕವಾಗಿ ರೇಖಾ ರಾಮಾಯಣ ಮುದ್ರಣವಾಗುತ್ತಿದೆ. ರೇಖಾಚಿತ್ರಗಳಿರುವ ಪುಸ್ತಕಗಳಿಗೆ ಬೇಡಿಕೆ ಮನಗಂಡು ಇಂತಹ ಅಪರೂಪದ ರೇಖಾಚಿತ್ರಗಳ ಪುಸ್ತಕವನ್ನು ಮುದ್ರಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುತ್ತಿರುವುದರಿಂದ ಕಲಾಭಿಮಾನಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತವಾಗುತ್ತದೆ.

ಸದರಿ ಪುಸ್ತಕವನ್ನು ಸಂಪಾದಿಸುತ್ತಿರವ ಶ್ರೀ ಕೆ.ವಿ.ಸುಬ್ರಮಣ್ಯಂ ಅವರು ಬಹಳ ಸುಂದರವಾಗಿ ಮೂರು ಸಂಪುಟಗಳಲ್ಲಿ ಹೊರತರಲು ಶ್ರಮಿಸುತ್ತಿದ್ದಾರೆ. ಅದರ ಅಂತಿಮ ಫಲವಾಗಿ ಮೂರನೇ ಸಂಪುಟವಾಗಿ ರೇಖಾ ರಾಮಾಯಣ ಸಂಪುಟವು ಹೊರಬರುತ್ತಿದೆ. ಪುಸ್ತಕ ಮುದ್ರಿಸಲು ಹಸ್ತಪ್ರತಿ ನೀಡಿ ಸಹಕರಿಸಿದ ದಿ.ಶಿಲ್ಪಿ ಶ್ರೀ ಎ.ಸಿ.ಹನುಮಂತಾಚಾರ್ಯರ ಧರ್ಮಪತ್ನಿಯವರಾದ ಶ್ರೀಮತಿ ಸರೋಜಾದೇವಿ ಆಚಾರ್ಯ ಹಾಗೂ ಅವರ ಮಕ್ಕಳಿಗೆ ಮತ್ತು ಶಿಲ್ಪಕಲಾ ಟ್ರಸ್ಟ್, ದೇವನಹಳ್ಳಿಯ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಶಿವಶಕ್ತಿ, ಮಹಾ ವಿಷ್ಣುನಿಧಿ, ರೇಖಾ ರಾಮಾಯಣ ರೇಖಾಚಿತ್ರ ಎಂಬ ಪುಸ್ತಕಗಳ ಮೂರು ಸಂಪುಟದ ಸಂಪಾದಕರಾಗಿರುವ ಶ್ರೀ ಕೆ.ವಿ.ಸುಬ್ರಮಣ್ಯಂ ಅವರಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಈ ಪುಸ್ತಕದ ಮೂರು ಸಂಪುಟಗಳ ಮುದ್ರಣಕ್ಕೆ ಸೂಕ್ತ ಸಲಹೆ ನೀಡಿದ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಶ್ರೀ ವೆಂಕಟಾಚಲಪತಿ ಅವರಿಗೂ, ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿ ಅವರಿಗೂ, ಅಕಾಡೆಮಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ, ಅಕಾಡೆಮಿಯ ಸಿಬ್ಬಂದಿಗಳಿಗೂ, ಈ ಪುಸ್ತಕವನ್ನು ಅಂದವಾಗಿ ಮುದ್ರಣ ಮಾಡುತ್ತಿರುವ ಉಜ್ವಲ್ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಗೂ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್
ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ನಿಮ್ಮೊಂದಿಗೆ...

ಭಾರತೀಯ ಮಕ್ಕಳ ಬಾಲ್ಯವೇ ಪುರಾಣಗಳ ವೈಭವಯುತ ಪಾತ್ರಧಾರಿಗಳನ್ನು 'ನೋಡುವಿಕೆ' 'ಕೇಳುವಿಕೆ'ಗಳಿಂದ 'ಕಥಾನಕ'ಗಳಿಂದ ತುಂಬಿಹೋಗಿರುತ್ತದೆ. ಮನೆಯಲ್ಲಿ ದೇವ–ದೇವಿಯರ ಪೂಜಾಪಟಗಳು, ಹಳ್ಳಿ ಹಳ್ಳಿಗಳ ನಡುವೆ ಆಕಾಶಕ್ಕೆ ಗುರಿಯಿಟ್ಟ ಗೋಪುರಗಳ ದೇಗುಲಗಳು. ದೇವತಾ ರೂಪಗಳ ಉಬ್ಬು ಶಿಲ್ಪಗಳು ಒಳಗಿನ, ಹೊರಗಿನ ಅವಕಾಶಗಳನ್ನು ತುಂಬಿಕೊಂಡಿದ್ದರೆ, ಗರ್ಭಗುಡಿಯಲ್ಲಿನ ಶಿಲಾಮೂರ್ತಿಗಳು. ಉತ್ಸವದ ಕಂಚಿನ ಶಿಲ್ಪಗಳ ಆಕರ್ಷಣೆ ಅಷ್ಟಿಷ್ಟಲ್ಲ.

ಈ ವಿಗ್ರಹಗಳಿಗೆ ನಮ್ಮ ವಿಷ್ಣು, ಗರುಡ, ಅಗ್ನಿ ಇತ್ಯಾದಿ ಪುರಾಣಗಳು, ಚಿತ್ರಸೂತ್ರ, ಚಿತ್ರಲಕ್ಷಣ, ಸಮರಾಂಗಣ ಸೂತ್ರಧಾರ, ಶುಕ್ರನೀತಿಸಾರ, ಮಾನಸಾರ, ಶಿಲ್ಪರತ್ನ, ಅಗ್ನಿಪುರಾಣ, ವಿಷ್ಣು ಪುರಾಣ, ಕಾಶ್ಯಪ ಶಿಲ್ಪ ಶಾಸ್ತ್ರ ಇತ್ಯಾದಿ ಮಧ್ಯಕಾಲೀನ ಪಠ್ಯಗಳ ಎಲ್ಲ ವಿವರಗಳು ಪೂರಕ ಭೂಮಿಕೆಯನ್ನು ನೀಡುತ್ತವೆ. ಈ ಮೂಲದ ಶಿಲ್ಪ ಸೃಷ್ಟಿ ನಮ್ಮಲ್ಲಿ ಶತಮಾನಗಳಿಂದ ಗುರುಕುಲ ಪದ್ಧತಿಯಲ್ಲಿ ನಡೆದು ಬಂದಿದೆ. ಸಂಪ್ರದಾಯ ಶಿಲ್ಪಕಲಾ ಸೃಷ್ಟಿಯು ನಿರಂತರವಾಗಿ ಬೆಳೆದು ಬಂದಿದೆ. ಸಾವಿರಾರು ಶಿಲ್ಪಿಗಳು ರಾಜ್ಯದಲ್ಲಿ ಇದ್ದಾರೆ. ಶಿವಾರಪಟ್ಟಣದಂತಹ ಸಂಪ್ರದಾಯ ಶಿಲ್ಪಿಗಳ ಹಳ್ಳಿಯು ೨೦೧೬ರಲ್ಲಿಯೂ ತೀವ್ರ ಚಟುವಟಿಕೆಯಿಂದ ಕೂಡಿದ್ದಿತು. ದೇವನಹಳ್ಳಿಯ ಶಿಲ್ಪ ಕಲಾ ಶಾಲೆಯೂ ಈ ಹಿನ್ನೆಲೆಯಲ್ಲಿ ಗಣನೀಯ ಪ್ರಾಮುಖ್ಯತೆಯನ್ನು ಹೊಂದಿದೆ. ಶತಮಾನದ ಹಿಂದೆ ಅಲ್ಲಿದ್ದು ಶಿಲ್ಪಕಲೆಯನ್ನು ಕಲಿಸಿದ ಚೆನ್ನಕೇಶವ ಆಚಾರ್ಯರ ನೂರಾರು ರೇಖಾಚಿತ್ರಗಳನ್ನು ೨೦೧೬ರ ಸಂದರ್ಭದಲ್ಲಿಯೂ ಸಂರಕ್ಷಿಸಿಕೊಂಡು ಬಂದಿರುವ ಶ್ರೀಮತಿ ಸರೋಜಾದೇವಿ ಆಚಾರ್ಯ ಹಾಗೂ ಅವರ ಮಕ್ಕಳು ಮತ್ತು ಅಲ್ಲಿನ ಶಿಲ್ಪ ಕಲಾ ಟ್ರಸ್ಟ್‌ನ ಶಿಲ್ಪಿ ಕೆ.ಬಿ. ಶಂಕರನಾರಾಯಣ ಮತ್ತು ಇತರ ಮಿತ್ರರಿಗೆ ನಾವು ಕೃತಜ್ಞರಾಗಿರಬೇಕು. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಈ ರೇಖಾಚಿತ್ರಗಳನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸುತ್ತಿರುವುದು ಒಂದು ವಿಶೇಷ ಸಂದರ್ಭ ಸೃಷ್ಟಿಯೇ ಸರಿ. ಅಧ್ಯಕ್ಷರು ಮಹಾದೇವಪ್ಪ ಶಂಭುಲಿಂಗಪ್ಪ ಶಿಲ್ಪಿಯವರ ಆಶಯದಂತೆ ಈ ಸಂಪುಟಗಳು ಪ್ರಕಟಗೊಳ್ಳುತ್ತಿವೆ.

ಚೆನ್ನಕೇಶವ ಆಚಾರ್ಯರ ಸುಮಾರು ೫೦೦ಕ್ಕೂ ಹೆಚ್ಚು ರೇಖಾಚಿತ್ರಗಳನ್ನು ಅವರ 'ದೇವತಾದಿ ಚಿತ್ರಸಾರ' ಸಂಗ್ರಹದಿಂದ ಆಯ್ದು, ಮುಖ್ಯವಾಗಿ ಮೂರು ಶೀರ್ಷಿಕೆಗಳಡಿ ಸಂಗ್ರಹಿಸಲಾಯಿತು. ಹಲವು ರೇಖಾಚಿತ್ರಗಳನ್ನು ಈ ಸಂಪುಟಗಳ ಚೌಕಟ್ಟಿನಲ್ಲಿ ಸೇರಿಸಲಾಗದ ನೋವು ನನಗೆ ಇದೆ. ಆದರೂ ಅತ್ಯುತ್ತಮ ಮತ್ತು ಮುಖ್ಯವಾದುವನ್ನೆಲ್ಲವೂ ಈ ಸಂಗ್ರಹಗಳಲ್ಲಿ ಸೂಕ್ತ ಹಿನ್ನೆಲೆ ನಿರ್ಮಿಸಿ ಸೇರ್ಪಡೆ ಮಾಡಲಾಗಿದೆ. ಅವುಗಳಲ್ಲಿ ಕೊನೆಯ ಮೂರನೆಯ ಸಂಪುಟ 'ರೇಖಾರಾಮಾಯಣ' ನಿಮ್ಮ ಕೈಯಲ್ಲಿದೆ. ಈ ಸಂಪುಟದ ರೇಖಾಚಿತ್ರಗಳ ಅಡಿ ಇರುವ ಶೀರ್ಷಿಕೆ ಹೆಸರುಗಳನ್ನು ಚೆನ್ನಕೇಶವ ಆಚಾರ್ಯರ ಮೂಲ ತೆಲುಗುಭಾಷೆಯ ಲಿಪಿಯ ರೇಖಾಚಿತ್ರಗಳಿಂದಲೇ ಸಂಗ್ರಹಿಸಿ ನೀಡಲಾಗಿದೆ. ದೇವನಹಳ್ಳಿಯ ಶಿಲ್ಪಕಲಾ ಶಾಲೆಗೆ ೧೯೮೦ರ ದಶಕದಲ್ಲಿ ಹನುಮಂತಾಚಾರ್ಯರ ಸಂದರ್ಭದಲ್ಲಿ ಅವರಲ್ಲಿ ಕಲಿಯಲು ಪದೇ ಪದೇ ಭೇಟಿ ನೀಡಿದ ನಾನು ತೀವ್ರತೆಯಿಂದ ತೊಡಗಿಕೊಳ್ಳಲು ಆಗಿರಲಿಲ್ಲ. ಆದರೂ ಶಿಲ್ಪಕಲಾ ಶಾಲೆಯ ಸಂಪರ್ಕ ಇದ್ದಿತು. ಸಂಪ್ರದಾಯ ಶಿಲ್ಪದ ಪ್ರೀತಿಯೂ ಬೆಳೆಯಿತು. ಆದರೆ ಆಗ ನೋಡಲು ಆಗದ ಚೆನ್ನಕೇಶವ ಆಚಾರ್ಯರ ರೇಖಾಚಿತ್ರಗಳನ್ನು ಈಗ ನೋಡುವ ಸಂದರ್ಭ ಒದಗಿದೆ. ಈ ಮೂರನೆಯ 'ರೇಖಾ ರಾಮಾಯಣ' ಸಂಪುಟವು ರೂಪುಗೊಳ್ಳಲು ಅಕಾಡೆಮಿಯ ಅಧ್ಯಕ್ಷರೇ ಅಲ್ಲದೆ ರಿಜಿಸ್ಟ್ರಾರ್ ಇಂದ್ರಮ್ಮ ಹೆಚ್.ವಿ. ಹಾಗೂ ಇತರ ಸದಸ್ಯ ಮಿತ್ರರಿಗೆ ನಾನು ಆಭಾರಿಯಾಗಿದ್ದೇನೆ. ದೇವನಹಳ್ಳಿ ಶಿಲ್ಪಕಲಾ ಶಾಲೆಯ ಶ್ರೀಮತಿ ಸರೋಜಮ್ಮ ಮತ್ತು ಮಕ್ಕಳು ಹಾಗೂ ಶಿಲ್ಪಕಲಾ ಟ್ರಸ್ಟ್‌ನ ಕೆ.ಬಿ. ಶಂಕರ ನಾರಾಯಣ ಮತ್ತು ಮಿತ್ರರು, ಈ ಪುಟ್ಟ ಸಂಪುಟವು ಸುಂದರವಾಗಿ ಮೂಡಿ ಬರಲು ಶ್ರಮಿಸಿದ್ದಾರೆ. ಉಜ್ವಲ್ ಎಂಟರ್‌ಪ್ರೈಸಸ್‌ನ ಮಿತ್ರರು ಮತ್ತು 'ಜಕಣಾಚಾರಿ' ಪ್ರಶಸ್ತಿ ವಿಜೇತ ಶಿಲ್ಪಿ ವೆಂಕಟಾಚಲಪತಿ ಅವರು ಹಲವು ರೀತಿಗಳಲ್ಲಿ ನನಗೆ ನೆರವಾಗಿದ್ದಾರೆ. ಇವರೆಲ್ಲರಿಗೂ ನಾನು ಋಣಿ. ನಿಮ್ಮ ಹಲವು 'ಓದುವಿಕೆ' ಮತ್ತು 'ನೋಡುವಿಕೆ'ಗಳೂ ಈ ಸಂಪುಟದ ಉದ್ದೇಶವನ್ನು ಮತ್ತಷ್ಟು ವಿಸ್ತರಿಸಬಲ್ಲದು.

–ಕೆ.ವಿ. ಸುಬ್ರಹ್ಮಣ್ಯಂ


೨೦೧೬

ದೇವನಹಳ್ಳಿಯ ಚೆನ್ನಕೇಶವ ಆಚಾರ್ಯ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯು ಐತಿಹಾಸಿಕ, ಸಾಂಸ್ಕೃತಿಕ ಕಾರಣಗಳಿಗಾಗಿ ಖ್ಯಾತವಾಗಿದೆ. ಮಾಗಡಿ ಕೆಂಪೇಗೌಡ, ಹೈದರಾಲಿ ಮೊದಲಾದವರು ಈ ಊರಿನೊಂದಿಗೆ ಸಂಬಂಧ ಸಾಧಿಸಿದ್ದರು. ಟಿಪ್ಪುಸುಲ್ತಾನನ ಜನ್ಮಸ್ಥಳವೂ ಈ ದೇವನಹಳ್ಳಿಯೇ ಆಗಿದೆ. ವಿಶಿಷ್ಟ ಕೋಟೆ, ಸುತ್ತಲಿನ ಕಂದಕ, ಆಕರ್ಷಕ ಕೆರೆ ಇತ್ಯಾದಿಗಳು ಅಂದಿನ ದಿನಗಳ ಚಹರೆಗಳನ್ನು ಹೊಂದಿವೆ. ಬಹುಮುಖ್ಯವಾಗಿ ವೇಣುಗೋಪಾಲ ಸ್ವಾಮಿ ದೇವಾಲಯ ೨೦೧೬ರ ಸಂದರ್ಭದಲ್ಲಿಯೂ ತನ್ನ ಐತಿಹಾಸಿಕ, ಸಾಂಸ್ಕೃತಿಕ ಹೊಳಹುಗಳಿಂದಾಗಿ ಗಮನಿಸುವಂತಿತ್ತು.

ದೇವನಹಳ್ಳಿಯ ಕೋಟೆ, ದೇವಾಲಯಗಳ ನಿರ್ಮಾಣದ ಹಿಂದಿನ ಕರಕುಶಲಿಗಳು ಅಸಾಮಾನ್ಯರೇ ಆಗಿದ್ದರು. ಆ ಮನೆತನದ ಶಿಲ್ಪಿಗಳು ೨೦೧೬ರ ಸಂದರ್ಭದಲ್ಲಿಯೂ ಶಿಲ್ಪಕಲಾ ಶಾಲೆಯ ಆಶ್ರಯವನ್ನು ಅಗತ್ಯ ಶಿಲ್ಪಿಗಳಿಗೆ ನೀಡುತ್ತ, ಸಂಪ್ರದಾಯ ಶಿಲ್ಪ ಸೃಷ್ಟಿಗೆ ಪೂರಕ ವಾತಾವರಣ ನಿರ್ಮಿಸಿದ್ದರು.

ಸುಮಾರು ಕ್ರಿ.ಶ. ೧೭೦೦ರ ಸಂದರ್ಭ. ದೇವನಹಳ್ಳಿಯ ಪಾಳೆಯಗಾರ ಮಲ್ಲಭೈರೇಗೌಡ ಮತ್ತು ದೇವೇಗೌಡರು ಆ ಕಾಲಕ್ಕೆ ಪ್ರಸಿದ್ಧ ಶಿಲ್ಪಿಗಳಾಗಿದ್ದ ಶಿಲ್ಪಿ ಸಿದ್ಧಾಂತಿ ವೇದಾಂತಂ ಗೋಪಾಲ ಆಚಾರ್ಯ ಮತ್ತು ಅವರ ಸೋದರ ರಾಮ ಆಚಾರ್ಯರವರುಗಳನ್ನು ದೇವನಹಳ್ಳಿಗೆ ಸ್ವಾಗತಿಸಿದರು. ಈ ಶಿಲ್ಪಿಗಳಿಂದ ದೇವನಹಳ್ಳಿಯ ಕಲ್ಲಿನಕೋಟೆ, ಗೋಪಾಲಸ್ವಾಮಿ ದೇವಾಲಯಗಳು ಕಟ್ಟಲ್ಪಟ್ಟವು. ಕೃಷ್ಣಮಾಚಾರ್ಯರೆಂಬ ಈ ಮನೆತನದ ಶಿಲ್ಪಿಯೊಬ್ಬರು "ದೇಶಪರ್ಯಟನೆಗೆಂದು ಹೊರಟವರು ಅಲ್ಲಲ್ಲಿ ತಮ್ಮ ಕೃತಿಗಳನ್ನು ರಚಿಸಿದ್ದಾರೆ. ಇವರ ಪಾಂಡಿತ್ಯವನ್ನು ಮೆಚ್ಚಿದ ತಿರುವಾಂಕೂರು ಮಹಾರಾಜರು ಇವರಿಗೆ "ಶಿಲ್ಪಸಿದ್ಧಾಂತಿ" ಎಂಬ ಬಿರುದನ್ನು ಕೊಟ್ಟು ಗೌರವಿಸಿದರೆಂದು ತಿಳಿದುಬರುತ್ತದೆ. ಇವರ ಮಕ್ಕಳಾದ ಹನುಮಂತಾಚಾರ್ಯರ ಮಕ್ಕಳು ಮೂವರೂ ಯಥಾವತ್ತಾಗಿ ಶಾಸ್ತ್ರವೇತ್ತರು, ಕುಶಲ ಕರ್ಮಿಗಳು. ಒಬ್ಬರು ಜನ್ಮಾಂಧರಾದರೂ ಶಾಸ್ತ್ರಜ್ಞರಿದ್ದರು. ಇನ್ನಿಬ್ಬರಾದ ತಿರುವೆಂಕಟಾಚಾರ್ಯ ಮತ್ತು ಚೆನ್ನಕೇಶವ ಆಚಾರ್ಯರು ಶಿಲ್ಪಶಾಸ್ತ್ರ ಪರಿಣಿತರು. ದಕ್ಷಿಣ ದೇಶದಾದ್ಯಂತ ಇವರು ಶಿಲ್ಪಕೃತಿಗಳನ್ನು ಒದಗಿಸಿ ಕೊಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿಯೇ ಪ್ರಾಯಶಃ ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಅವರು ಕಡೆದಿರುವ ಶಿಲಾಮೂರ್ತಿಗಳಿವೆ. ದಾವಣಗೆರೆಯಲ್ಲಿರುವ ಶ್ರೀ ಕನ್ನಿಕಾಪರಮೇಶ್ವರಿ ವಿಗ್ರಹ, ರಾಜೇನಹಳ್ಳಿಯವರ ರಾಮಮಂದಿರದ ಶ್ರೀ ರಾಮಮೂರ್ತಿ ವಿಗ್ರಹ, ಮೊದಲಾದ ಸುಂದರ ಮೂರ್ತಿಗಳು ಅವರ ರಚನೆಯವು. ಚೆನ್ನಕೇಶವ ಆಚಾರ್ಯರಿಗೆ ಶಿಲ್ಪಸಿದ್ಧಾಂತಿ, ಶಿಲ್ಪವಲ್ಲಭ, ಶಿಲ್ಪವಿದ್ವಾನ್ ಮೊದಲಾದ ಬಿರುದುಗಳಿದ್ದವು." (ಬಿ.ಎ.ಆರ್. ಬೆಂಗಳೂರಿನ ಕಲಾಮಂದಿರದ 'ಕಲಾ' ಪತ್ರಿಕೆ. ಸಂಪಾದಕರು: ಅ.ನ. ಸುಬ್ಬರಾಯರು.) ಈ ಚೆನ್ನಕೇಶವ ಆಚಾರ್ಯರ ಮಕ್ಕಳೇ ಎ.ಸಿ. ಹನುಮಂತ ಆಚಾರ್ಯ. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರೂ ತಾಯಿಯಿಂದ ಕಲಿತು ತಂದೆಯ ಹಾದಿಯಲ್ಲಿ ಮುನ್ನಡೆದರು. ನೂರಾರು ಪುಟಗಳಲ್ಲಿ ಚೆನ್ನಕೇಶವ ಆಚಾರ್ಯರು ರೇಖಿಸಿಟ್ಟಿದ್ದ ರೇಖಾಚಿತ್ರಗಳು ಎ.ಸಿ. ಹನುಮಂತ ಆಚಾರ್ಯರನ್ನೇ ಅಲ್ಲದೆ ೨೦೧೬ರ ಸಂದರ್ಭದಲ್ಲಿಯೂ ಅಲ್ಲಿ ಕಲಿಯುತ್ತಿದ್ದವರಿಗೆ ಉಪಯುಕ್ತವಾಗಿದ್ದವು. ಪ್ರಸ್ತುತ ಪ್ರಕಟಣೆಯಲ್ಲಿ ನೀವು ನೋಡುತ್ತಿರುವ ದೈವೀಕ ರೇಖಾಧ್ಯಾನದಂತಹ ರೇಖಾಚಿತ್ರಗಳು ಶತಮಾನದ ಅಂತರದಲ್ಲಿಯೂ, ಸಂರಕ್ಷಣೆಯ ಸಮಸ್ಯೆಗಳನ್ನು ಮೀರಿ ಉಳಿದುಕೊಂಡಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಚೆನ್ನಕೇಶವ ಆಚಾರ್ಯರ ಕುಟುಂಬದ ಪರಂಪರೆಯ ಪ್ರೀತಿ ಮತ್ತು ಗೌರವಗಳು ಎದ್ದು ಕಾಣುತ್ತವೆ. ಲಭ್ಯ ರೇಖಾಚಿತ್ರಗಳನ್ನು ಸೂಕ್ತ ರೀತಿಯಲ್ಲಿ ಮೂರು ಪುಟ್ಟ ಪುಟ್ಟ ಸಂಪುಟಗಳಲ್ಲಿ ಸಂಗ್ರಹಿಸಲಾಗಿದೆ. ಪ್ರಸ್ತುತ 'ರೇಖಾ ರಾಮಾಯಣ' ಮೂರನೆಯ ಸಂಪುಟದಲ್ಲಿ ರಾಮ ಸಂಬಂಧಿತ ರೇಖಾಚಿತ್ರಗಳಿವೆ. ವಿಶೇಷವೆಂದರೆ, ಈ ಸಂಪುಟದಲ್ಲಿ ಚೆನ್ನಕೇಶವ ಆಚಾರ್ಯರು ಸಪ್ತಸಾಗರಗಳನ್ನು (೧೮, ೧೯, ೨೮, ೨೯ನೆಯ ಪುಟಗಳನ್ನು ನೋಡಿರಿ) ರೇಖೆಗಳಲ್ಲಿ ಗ್ರಹಿಸಿರುವ ರೀತಿ ಮತ್ತು ಕಿಷ್ಕಿಂದಾಕಾಂಡದ ಹಲವು ಚಿತ್ರಗಳು ದುಂಡುತನದ ಜತೆಜತೆಗೇ ವಿಶಿಷ್ಟ ರೇಖೆ, ರೂಪ ಪ್ರಮಾಣಗಳನ್ನು ಅರಗಿಸಿಕೊಂಡು ಉಬ್ಬು ಶಿಲ್ಪ ಸೃಷ್ಟಿಗೆ ಹೊಂದುವಂತಿರುವ ನಿರ್ವಹಣೆಗಳು ಗಮನಿಸುವಂತಿವೆ. ನಮ್ಮ ದೇಶ, ವಿದೇಶಗಳ ಹಲವು ರಾಮಾಯಣಗಳ ಜೊತೆಗೆ ಇದೂ ಒಂದು ರಾಮಾಯಣ, ರೇಖಾರಾಮಾಯಣ.



ಪರಿವಿಡಿ

<u>ರೇಖಾ ರಾಮಾಯಣ</u>

೧. ಬಾಲಕಾಂಡ

ಯುವ ಪ್ರಸನ್ನವದನಃ ಸಿಂಹಸ್ಕನ್ಧೋರುಣೇಕ್ಷಣಃ।
ಆಜಾನುಬಾಹುಃ ಕರ್ತವ್ಯೋ ರಾಮೋ ಬಾಣಧನುರ್ಧರಃ॥

– ಪಾಂಚರಾತ್ರ ಆಗಮ

ಬುದ್ಧಿಮಾನ್ ನೀತಿಯಮಾನ್ ವಾಗ್ಮಿ ಶ್ರೀಮಾನ್ ಶತೃನಿಬರ್ಹಣಃ।

ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವೋ ಮಹಾಹನುಃ
ಮಹೋರಸ್ಕೋ ಮಹೇಶ್ವಾಸೋ ಗೂಢಜತ್ರುರರಿಂದಮಃ॥
ಆಜಾನುಬಾಹುಃ ಸುಶಿರಾಃ ಸುಲಲಾಟಃ ಸುವಿಕ್ರಮಃ
ಸಮಃ ಸಮವಿಭಕ್ತಾಂಗಃಸ್ನಿಗ್ಧವಣಃ ಪ್ರತಾಪವಾನ್।
ಪೀನವಕ್ಷಾ ವಿಶಾಲಾಕ್ಷೋಲಕ್ಷ್ಮೀವಾನ್ ಶುಭಲಕ್ಷಣಃ॥
ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇರತಃ॥
ಯಶಸ್ವೀ ಜ್ಞಾನ ಸಂಪನ್ನಃ ಸಮಾಧಿಮಾನ್॥

ವಿಷ್ಣುನಾ ಸದೃಶೋ ವೀರ್ಯೇಸೋಮವತ್ ಪ್ರಿಯದರ್ಶನಃ
ಕಾಲಾಗ್ನಿ ಸದೃಶಃ ಕ್ರೋಧೇಕ್ಷಮಯಾ ಪೃಥಿವೀಸಮಃ॥
ಧನದೇನ ಸಮಸ್ತ್ಯಾಗೇ ಸತ್ಸೇಧರ್ಮ ಇವಾಪರಃ॥ – ಬಾಲಕಾಂಡ, ವಾಲ್ಮೀಕಿ ರಾಮಾಯಣ

ಗಂಗಾ ನದಿಯ ಉಪ ನದಿಗಳಲ್ಲಿ ತಮಸಾನದಿಯು ಒಂದು. ಈ ನದಿಯ ತೀರದಲ್ಲಿಯೇ ವಾಲ್ಮೀಕಿ ಮಹಾಋಷಿಯ ಆಶ್ರಮವಿದ್ದಿತು. ಅವರ ತಪಸ್ಸು ಅವನ ಸುತ್ತಲೂ ಹುತ್ತ ಬೆಳೆಯಲು ಕಾರಣವಾಯಿತು. ಅದನ್ನು ಬೇಧಿಸಿ ಹೊರ ಬಂದದ್ದರಿಂದ ಅಂದರೆ ಹುತ್ತದಿಂದ (ವಲ್ಮೀಕ) ಹೊರಬಂದದ್ದರಿಂದ ಅವನಿಗೆ ವಾಲ್ಮೀಕಿ ಎಂಬ ಹೆಸರು. ಒಮ್ಮೆ ವಾಲ್ಮೀಕಿ ಆಶ್ರಮಕ್ಕೆ ನಾರದರು ಬಂದರು. ಅವರನ್ನು ಸ್ವಾಗತಿಸಿದ ನಂತರ ವಾಲ್ಮೀಕಿಯ ಪ್ರಶ್ನೆ.

"ಮಾನ್ಯರೆ ಈಗ ಜಗತ್ತಿನಲ್ಲಿ ಶ್ರೇಷ್ಠ ಪುರುಷನು ಇದ್ದಾನೆಯೆ? ಎಲ್ಲ ಅತ್ಯುತ್ತಮ ಗುಣಗಳನ್ನು ಅವನು ಹೊಂದಿದ್ದಾನೆಯೆ? ಇದ್ದರೆ ಯಾರವನು? ಎಂಬುದಕ್ಕೆ ಉತ್ತರವಾಗಿ ನಾರದರು 'ಇದ್ದಾನೆ, ಅವನೇ ಇಕ್ಷ್ವಾಕು ವಂಶದ ಅಯೋಧ್ಯೆಯ ಮಹಾರಾಜ; ರಾಮ' ಎಂದು ಹೇಳಿ ಸಂಕ್ಷಿಪ್ತವಾಗಿ ಶ್ರೀರಾಮನ ಕಥೆಯನ್ನು ಹೇಳಿದರು. ಈ ಹಿನ್ನೆಲೆಯಲ್ಲಿ ವಾಲ್ಮೀಕಿಯು ರಾಮಾಯಣವನ್ನು ವಿಸ್ತರಿಸಿ ಬರೆದನು ಎಂದು ಅಗ್ನಿ ಪುರಾಣದಲ್ಲಿ ಅಗ್ನಿದೇವನು ವಸಿಷ್ಠ ಋಷಿಗೆ ವಿವರಿಸಿದ್ದಾನೆ. ವಾಲ್ಮೀಕಿಯ ರಾಮಾಯಣವು ವಿಸ್ತಾರವಾದ ಒಂದು ಮಹಾಕಾವ್ಯ.

ಮಹಾವಿಷ್ಣುವು ಶೇಷಶಯ್ಯೆಯ ಮೇಲೆ ಯೋಗ ನಿದ್ರೆಯಲ್ಲಿದ್ದಾಗ ಅವನ ಹೊಕ್ಕಳಿನಿಂದ ಬ್ರಹ್ಮನು ಹುಟ್ಟಿದನು. ಬ್ರಹ್ಮನಿಗೆ ಮಗನಾಗಿ ಮರೀಚಿ ಋಷಿ, ಮರೀಚಿಗೆ ಕಶ್ಯಪ, ಕಶ್ಯಪನಿಗೆ ಸೂರ್ಯ, ಸೂರ್ಯನಿಗೆ ವೈವಸ್ವತಮನು ಹುಟ್ಟಿದರು. ವೈವಸ್ವತ ಮನುವಿಗೆ ಇಕ್ಷ್ವಾಕುಕಿ, ಇಕ್ಷ್ವಾಕುಕಿ ವಂಶದಲ್ಲಿ ಕಕುತ್ಸ್ಥ ಎಂಬ ಅರಸನೂ ಹುಟ್ಟಿದರು. ಕಕುತ್ಸ್ಥನಿಗೆ ರಘು, ರಘುವಿಗೆ ಅಜನೂ, ಅಜನಿಗೆ ದಶರಥ ಎಂಬುವವನು ಹುಟ್ಟಿದರು. ಈ ದಶರಥನಿಗೆ ಲಂಕಾಧಿಪತಿ ರಾವಣ ಮೊದಲಾದ ಹಲವರು ರಾಕ್ಷಸರನ್ನು ವಧಿಸುವಂತಹ, ಮಹಾವಿಷ್ಣುವಿನ ಅಂಶದ ನಾಲ್ಕು ರೂಪದಿಂದ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬುವವರು ಹುಟ್ಟಿದರು. ಈ ಹುಟ್ಟಿನ ಹಿನ್ನೆಲೆ ವಿಶಿಷ್ಟವಾಗಿದೆ.

ಗಂಗಾ ಮತ್ತು ಅದರ ಉಪನದಿ ಸರಯೂ ತೀರಗಳಲ್ಲಿ ವಿಶಾಲವಾಗಿ ಕೋಸಲ ದೇಶವು ಬೆಳೆದಿತ್ತು. ಸರಯೂ ನದಿಯ ದಂಡೆಯಲ್ಲಿಯೇ ಕೋಸಲದ ಸುಂದರ ನಗರ ಅಯೋಧ್ಯೆ ಇದ್ದಿತು. ಸೂರ್ಯ ವಂಶದ ಮನುಚಕ್ರವರ್ತಿಯ ನಿರ್ಮಾಣವೇ ಈ ನಗರ. ದಶರಥನ ಪಾಲನೆಗೆ ವಶಿಷ್ಠ ಮತ್ತು ವಾಮದೇವರು ಮುಖ್ಯರಾಗಿ ಪೌರೋಹಿತ್ಯವಹಿಸಿದ್ದರು. ಅಪಾರ ಸಂಪತ್ತು ಸಮೃದ್ಧಿಗಳ ನಡುವೆಯೂ ದಶರಥನಿಗೆ ಒಂದು ಚಿಂತೆ ಇದ್ದಿತು; ಮೂವರು ರಾಣಿಯರಿಂದಲೂ ಸಂತಾನವಾಗಿರಲಿಲ್ಲ.

ಈ ಬಗ್ಗೆ ರಾಜ ಗುರು ವಸಿಷ್ಠರಲ್ಲಿ ಪ್ರಸ್ತಾಪಿಸಿದ ಕಾರಣದಿಂದ ಅವರು 'ಋಷ್ಯಶೃಂಗನನ್ನು ಕರೆಸಿ ಅಶ್ವಮೇಧ ಹಾಗೂ ಪುತ್ರಕಾಮೇಷ್ಟಿಯಾಗಗಳನ್ನು ನೆರವೇರಿಸು; ಚಿಂತೆಯು ಪರಿಹಾರವಾಗುವುದು', ಎಂದರು. ದಶರಥನು ಋಷ್ಯಶೃಂಗನನ್ನು ಕರೆತರಲು ಅಂಗದೇಶಕ್ಕೆ ಹೋದನು. ಮಿತ್ರರಾಜನಾದ ರೋಮಪಾದನಿಗೆ ವಿಷಯ ತಿಳಿಸಿ ಅವನ ಅಳಿಯನಾದ ಋಷ್ಯಶೃಂಗನನ್ನು ಅಯೋಧ್ಯೆಗೆ ಗೌರವದಿಂದ ಕರೆತಂದು ಸ್ವಾಗತಿಸಿ ಸತ್ಕರಿಸಿದನು. ಈ ಸಂದರ್ಭವನ್ನು ದೇವನಹಳ್ಳಿಯ ಚೆನ್ನಕೇಶವ ಆಚಾರ್ಯರು ವೈವಿಧ್ಯಮಯವಾಗಿ ರೇಖೆಗಳಿಂದ ಚಿತ್ರಿಸಿದ್ದಾರೆ. ಇಂದ್ರಲೋಕದಿಂದ ಅಪ್ಸರೆಯರೂ ಋಷ್ಯಶೃಂಗನನ್ನು ಸಂತೋಷಪಡಿಸಲು ಆಗಮಿಸಿದ ಸಾಂದರ್ಭಿಕ ಚಿತ್ರಗಳು ಬಹುಸಂಖ್ಯೆಯಲ್ಲಿ ಮೂಡಿಬಂದಿವೆ.

ಸರಯೂ ನದಿಯ ಉತ್ತರ ತೀರದಲ್ಲಿ ಅಶ್ವಮೇಧಯಾಗವು ಪೂರ್ಣಗೊಂಡಿತು. ನಂತರ ದಶರಥನು ಸಂತಾನ ಪ್ರಾಪ್ತಿಗಾಗಿ ಪುತ್ರಕಾಮೇಷ್ಟಿ ಯಾಗ ಪ್ರಾರಂಭಿಸಿದನು. ದೇವತೆಗಳಿಗೆ ಹವಿಸ್ಸನ್ನು ಅರ್ಪಿಸಿದನು. ಬ್ರಹ್ಮನ ನೇತೃತ್ವದಲ್ಲಿ ದೇವತೆಗಳು ಅಲ್ಲಿಗೆ ಬಂದರು. ಲೋಕಭಯಂಕರನಾದ ರಾವಣನ ಸಂಹಾರಕ್ಕಾಗಿ, ಮತ್ತು ಅವನು ಮನುಷ್ಯರನ್ನು ಅನಾದರದಿಂದ ಕಾಣುವುದರಿಂದ ವಿಷ್ಣುವು ಮನುಷ್ಯನಾಗಿ, ದಶರಥನ ಮಗನಾಗಿ ಜನಿಸಿ ರಾವಣನನ್ನು ಸಂಹರಿಸುವುದಾಗಿಯೂ, ದೇವತೆಗಳೆಲ್ಲರೂ ಸಹಾಯಕರಾಗಿರಬೇಕೆಂದು ಬ್ರಹ್ಮನು ಹೇಳಿದನು. ವಾನರರೂಪತಾಳಿ ದೇವತೆಗಳೆಲ್ಲರೂ ಮಹಾವಿಷ್ಣುವಿಗೆ ಸಹಕರಿಸಬೇಕೆಂದು ಸೂಚಿಸಿದನು.

ಪುತ್ರಕಾಮೇಷ್ಟಿಯಾಗವು ಮುಕ್ತಾಯಗೊಂಡು ಯಾಗದ ಪ್ರಜ್ವಲಿಸುವ ಕುಂಡದಿಂದ ದೇವಪುರುಷನೊಬ್ಬನು ಪಾಯಸದ ಪಾತ್ರೆಯನ್ನು ಹಿಡಿದು ಹೊರಬಂದು ದಶರಥನಿಗೆ ನೀಡಿದನು. ಪಾಯಸವನ್ನು ಪತ್ನಿಯರಿಗೆ ಹಂಚಿ, ಯಾಗದ ಫಲವಾಗಿ ಸಂತಾನದ ಅನುಗ್ರಹ ಪಡೆಯಬೇಕೆಂದನು. ದಶರಥನು ದಿವ್ಯ ಪಾಯಸವನ್ನು ಪಟ್ಟದರಸಿಯರಾದ ಕೌಸಲ್ಯೆ, ಸುಮಿತ್ರೆ, ಕೈಕೇಯಿಯರಿಗೆ ಹಂಚಿದನು. ಪಟ್ಟದರಸಿ ಕೌಸಲ್ಯೆಗೆ ಅರ್ಧಭಾಗ ಮತ್ತು ಉಳಿದರ್ಧ ಭಾಗದ ಎರಡು ಭಾಗಗಳಲ್ಲಿ ಒಂದು ಭಾಗವನ್ನು ಸುಮಿತ್ರೆಗೆ ಕೊಟ್ಟ ದಶರಥನು ಉಳಿದ ಕಾಲುಭಾಗವನ್ನು ಮತ್ತೆ ಎರಡು ಭಾಗಗಳಾಗಿಸಿ ಒಂದು ಭಾಗವನ್ನು ಕೈಕೇಯಿಗೆ ಹಾಗೂ ಈ ಮೊದಲೇ ಹಂಚಿದ್ದ ಸುಮಿತ್ರೆಗೆ ಪುನಃ ಉಳಿದ ಭಾಗವನ್ನು ಕೊಟ್ಟನು!

ಪಾಯಸ ಸೇವನೆಯ ಫಲವಾಗಿ ಒಂದು ವರ್ಷ ಕಳೆದ ನಂತರ ಕೌಸಲ್ಯೆಯ ಗರ್ಭದಿಂದ ವಸಂತ ಋತುವಿನ ಚೈತ್ರಮಾಸದ ನವಮಿಯ ದಿನ ಪುನರ್ವಸು ನಕ್ಷತ್ರದಲ್ಲಿ ಮುದ್ದಾದ ಗಂಡು ಮಗು ಜನಿಸಿತು. ಶ್ರೀ ರಾಮನು ಜನಿಸಿದ ಆ ದಿನವೇ ಶ್ರೀರಾಮ ನವಮಿಯೆಂದು ಇಂದಿಗೂ ಆಚರಿಸಲ್ಪಡುತ್ತಿದೆ. ಮರುದಿನವೇ ಸೂರ್ಯೋದಯಕ್ಕೆ ಮುನ್ನ ಪುಷ್ಯ ನಕ್ಷತ್ರದಲ್ಲಿ ಕೈಕೆಯಿಗೆ ಜನಿಸಿದ ಗಂಡುಮಗುವೇ ಭರತ. ಅದೇ ದಿನ ಆಶ್ಲೇಷಾ ನಕ್ಷತ್ರದಲ್ಲಿ ಸುಮಿತ್ರೆಗೆ ಎರಡು ಗಂಡು ಮಕ್ಕಳು ಲಕ್ಷ್ಮಣ ಮತ್ತು ಶತೃಘ್ನರು ಜನಿಸಿದರು. ಹನ್ನೆರಡನೆಯ ದಿನ ವಸಿಷ್ಠರು ನಾಲ್ಕೂ ಮಕ್ಕಳಿಗೆ ನಾಮಕರಣ ಮಾಡಿದರು. ಕಾಲಕಾಲಕ್ಕೆ ಹಲವು ಸಂಸ್ಕಾರಗಳ ಜತೆ ಉಪನಯನವನ್ನು ವಸಿಷ್ಠರೇ ನೆರವೇರಿಸಿದರು.

ಈ ನಾಲ್ವರೂ ಬೆಳೆದು ದೊಡ್ಡವರಾದಂತೆಲ್ಲಾ ಆಟಪಾಠಗಳಲ್ಲಿ ಕುಶಲತೆಗಳಿಸಿದರು; ಪ್ರಜೆಗಳೆಲ್ಲರ ಆನಂದ ಹೆಚ್ಚಿಸುತ್ತ ಬೆಳೆದರು. ವೇದ ಮತ್ತು ಧನುರ್ವಿಧ್ಯೆಗಳಲ್ಲಿ ಪರಿಣಿತರಾದರು. ನಿರ್ದೋಶ, ನಿಷ್ಕಳಂಕ, ಸತ್ಯ, ಧರ್ಮಯುತವಾದ ವ್ಯಕ್ತಿತ್ವಗಳನ್ನು ಅರಗಿಸಿಕೊಂಡರು. ದಶರಥನಿಗೆ ಸಂತೋಷ ತುಂಬಿತು. ಗುಣವಂತರೂ, ವಿದ್ಯಾವಂತರೂ, ವಿನಯಶೀಲರೂ ಆದ ರಾಮ, ಭರತ, ಲಕ್ಷ್ಮಣ ಮತ್ತು ಶತೃಘ್ನರು ಯೌವನಕ್ಕೆ ಕಾಲಿಟ್ಟರು. ದಶರಥನು ಅವರಿಗೆ ಮದುವೆ ಮಾಡುವ ಚಿಂತನೆ ಮಾಡಿದನು.

ನಾಲ್ವರು ಮಕ್ಕಳ ಅಸಾಮಾನ್ಯ ಗುಣಲಕ್ಷಣ ಹಾಗೂ ಬೆಳವಣಿಗೆಗಳನ್ನು ನೋಡುತ್ತ ದಶರಥನು ಸುಖಿಸುತ್ತಿರುವಾಗಲೇ ಒಮ್ಮೆ ರಾಜಸಭೆಗೆ ವಿಶ್ವಾಮಿತ್ರ ಮಹರ್ಷಿ ಬಂದರು. ರಾಜ ಉಪಚಾರದ ನಂತರ "ನನ್ನಿಂದ ನಿಮಗೇನಾಗಬೇಕು. ಆ ಸೇವೆಯನ್ನು ಸಂತೋಷದಿಂದ ಮಾಡುವೆನು" ಎಂದು ಹೇಳಿದ ದಶರಥನಿಗೆ ವಿಶ್ವಾಮಿತ್ರರು" ನಾನು ಒಂದು ಯಾಗವನ್ನು ಮಾಡುತ್ತಿರುವೆನು, ಇಬ್ಬರು ಕಾಮರೂಪಿ ರಾಕ್ಷಸರ ತೊಂದರೆಯಲ್ಲಿ ಸಿಲುಕಿದ್ದೇನೆ. ಯಾಗ ದೀಕ್ಷೆಯಲ್ಲಿರುವ ನಾನು ಅವರನ್ನು ಶಿಕ್ಷಿಸುವಂತಿಲ್ಲ; ಸುಟ್ಟು ಬೂದಿ ಮಾಡುವಂತಿಲ್ಲ. ಸುಬಾಹು ಮತ್ತು ಮಾರೀಚ ಎಂಬ ರಾಕ್ಷಸರು ಹೋಮ ಕುಂಡದಲ್ಲಿ ಆಕಾಶದಿಂದ ರಕ್ತ, ಮಾಂಸ ಇತ್ಯಾದಿಗಳನ್ನು ಸುರಿದು ಯಾಗವನ್ನು ಅಪವಿತ್ರಗೊಳಿಸುತ್ತಿದ್ದಾರೆ. ಋಷಿಗಳನ್ನು ಸಂರಕ್ಷಿಸಬೇಕಾದುದು ರಾಜ ಧರ್ಮ. ಈ ಇಬ್ಬರು ಭಯಂಕರರ ನಿಗ್ರಹಕ್ಕಾಗಿ ನಿನ್ನ ನೆರವು ನನಗೆ ಬೇಕು. ನಿನ್ನ ಹಿರಿಯ ಮಗನಾದ ಶ್ರೀರಾಮನನ್ನು ನಮ್ಮೊಂದಿಗೆ ಕಳುಹಿಸು, ಅವನು ಸುಬಾಹು, ಮಾರೀಚರನ್ನು ನಿರ್ನಾಮ ಮಾಡುವನು; ಅಪಾರ ಕೀರ್ತಿ, ಶ್ರೇಯಸ್ಸಿಗೂ ಪಾತ್ರನಾಗುವನು" ಎಂದರು. ಮೊದಲೇ ಕೊಟ್ಟ ಮಾತಿನಂತೆ ವಸಿಷ್ಠರು ' ವಿಶ್ವಾಮಿತ್ರರ ಜೊತೆ ಶ್ರೀ ರಾಮನನ್ನು ಕಳಹಿಸಿಕೊಡು. ಚಿಂತಿಸಬೇಡ. ಈ ಬೆಳವಣಿಗೆಯಿಂದ ಅವನ ಕೀರ್ತಿ ಪತಾಕೆ ಹಾರಾಡಲಿದೆ; ಇಕ್ಷ್ವಾಕು ವಂಶ ಪರಂಪರೆಯಲ್ಲಿ ವಿಖ್ಯಾತನಾಗುವನು' ಎಂದ ಮಾತುಗಳನ್ನು ಕೇಳಿ ಸಮಾಧಾನ ಪಟ್ಟುಕೊಂಡ ದಶರಥನು ಶ್ರೀರಾಮ ಲಕ್ಷ್ಮಣರನ್ನು ವಿಶ್ವಾಮಿತ್ರರೊಂದಿಗೆ ಕಳುಹಿಸಿಕೊಟ್ಟನು.

ಅಯೋಧ್ಯೆಯಿಂದ ಒಂದೂವರೆ ಯೋಜನ ದೂರಸಾಗಿ ಸರಯೂ ನದಿಯ ತಟದಲ್ಲಿ 'ಬಲಾ-ಅತಿಬಲಾ' ಎಂಬ ಮಂತ್ರ ವಿದ್ಯೆಗಳನ್ನು ವಿಶ್ವಾಮಿತ್ರರು ರಾಮಲಕ್ಷ್ಮಣರಿಗೆ ಉಪದೇಶಿಸಿದರು. ಈ ಮಂತ್ರ ವಿದ್ಯೆಯ ಜಪದ ಫಲವಾಗಿ ಅವರಿಬ್ಬರಿಗೆ ಜ್ವರ, ಶ್ರಮಗಳ ಬಾಧೆ, ಹಸಿವು ಬಾಯಾರಿಕೆಗಳು ಕಾಡುವುದಿಲ್ಲ ಎಂದು ತಿಳಿಸಿದ ವಿಶ್ವಾಮಿತ್ರರು "ನಿದ್ರಿಸುವಾಗಲೂ ರಾಕ್ಷಸರು ನಿಮ್ಮನ್ನು ಜಯಿಸಲಾರರು" ಎಂದು ಹೇಳಿ ಮುನ್ನಡೆದರು.

ದೋಣಿಯ ಮೂಲಕ ಗಂಗೆಯನ್ನು ದಾಟಿದ ಅವರು ಭಯಂಕರ ಅರಣ್ಯವನ್ನು ಹೊಕ್ಕರು. ಆ ಅರಣ್ಯ ಕುರಿತು ವಿಶ್ವಾಮಿತ್ರರು ಇಂದ್ರನು ವೃತ್ರಾಸುರನನ್ನು ವಧಿಸಿದ ಸಂದರ್ಭ ವಿವರಿಸಿ, ಇಂದ್ರನು 'ಮಲದಾ' ಮತ್ತು 'ಕರೂಷಾ' ಎಂಬ ಎರಡು ರಾಜ್ಯಗಳನ್ನು ನಿರ್ಮಿಸಿದ್ದನ್ನು ತಿಳಿಸಿದರು. ಸುಕೇತು ಎಂಬ ಯಕ್ಷನಿಗೆ ಬ್ರಹ್ಮನ ವರಬಲದಿಂದ ಜನಿಸಿದವಳು ತಾಟಕಿ. ಅವಳ ಪತಿಯೇ ಸುಂದನು. ತಾಟಕಿಯ ಮಗನೇ ಮಾರೀಚ. ಒಮ್ಮೆ ಅಹಂಕಾರದಿಂದ ಅಗಸ್ತ್ಯರ ಮೇಲೆ ಹಲ್ಲೆ ಮಾಡಿದ ಸುಂದನನ್ನು ಕೋಪಗೊಂಡ ಅಗಸ್ತ್ಯರು ಸಂಹರಿಸಿದ ನಂತರ ತಾಟಕಿಯನ್ನು ನರಮಾಂಸ ತಿಂದು ಕ್ರೌರ್ಯಮಯ ಬದುಕನ್ನು ನಡೆಸುವಂತೆ ಶಪಿಸಿದರು. ಇಂತಹ ತಾಟಕಿಯನ್ನು ಸಂಹರಿಸಬೇಕೆಂದು ಶ್ರೀರಾಮನಿಗೆ ವಿಶ್ವಾಮಿತ್ರರು ಸೂಚಿಸಿದರು. 'ಒಳ್ಳೆಯವರ ಸಂರಕ್ಷಣೆ, ದುಷ್ಟರ ವಿನಾಶವೇ ಕ್ಷತ್ರಿಯರ ಧರ್ಮ' ಎಂದೂ ಹೇಳಿದರು. ಶ್ರೀರಾಮ, ಲಕ್ಷ್ಮಣರು ದೇವತೆಗಳ ಹರ್ಷೋದ್ಗಾರಗಳ ನಡುವೆ ತಾಟಕಿಯನ್ನು ಸಂಹರಿಸಿದರು. ಸಂಪ್ರೀತರಾದ ವಿಶ್ವಾಮಿತ್ರರು ಅಂದು ರಾತ್ರಿ ಆ ವನದಲ್ಲಿಯೇ ಉಳಿದುಕೊಂಡರು. ಶ್ರೀರಾಮನ ಪರಾಕ್ರಮದಿಂದ ಸಂತೃಪ್ತರಾದ ವಿಶ್ವಾಮಿತ್ರರು ರಾಮನಿಗೆ ಎಲ್ಲ ಬಗೆಯ ಅಂದರೆ ಕಾಲಚಕ್ರ, ದಂಡಚಕ್ರ, ವಿಷ್ಣು ಶಕ್ತಿ, ರುದ್ರ ಶಕ್ತಿ, ಬ್ರಹ್ಮಾಸ್ತ್ರ, ಇಂದ್ರಾಸ್ತ್ರ ಮೊದಲಾದ ನೂರು ದಿವ್ಯಾಸ್ತ್ರಗಳನ್ನು ಬೋಧಿಸಿದರು. ಮುಂದೆ ಸಿದ್ಧಾಶ್ರಮ ಪ್ರವೇಶಿಸಿದರು. ಇದೇ ವಿಶ್ವಾಮಿತ್ರರ ಯಾಗ ಭೂಮಿ. ಹಿಂದೆ ದೇವತೆಗಳ ಪ್ರಾರ್ಥನೆಯಂತೆ ಶ್ರೀ ಮನ್ನಾರಾಯಣನು ಅದಿತಿ ಮತ್ತು ಕಶ್ಯಪರ ಮಗನಾಗಿ, ವಾಮನನಾಗಿ ತಪಸ್ಸು ಮಾಡಿದ ಸ್ಥಳ; ಆಶ್ರಮವೇ ಇದು. ಮಹಾಬಲಶಾಲಿ ಬಲಿಯು ವಿರೋಚನನ ಮಗನು. ಅವನು ದೇವೇಂದ್ರನನ್ನು ಜಯಿಸಿದವನು. ಅವನೊಮ್ಮೆ ಒಂದು ಯಜ್ಞವನ್ನು ನಡೆಸಿ ಯಾರು ಏನುಕೇಳಿದರೂ ಕೊಡುವೆನೆಂದು ಸಾರಿದಾಗ ವಾಮನನು ಪುಟ್ಟ ರೂಪದಲ್ಲಿ ಅಲ್ಲಿಗೆ ಬಂದನು. ಅವನು ಅಲ್ಲಿಗೆ ಬಂದ ಉದ್ದೇಶವೇ ದೇವತೆಗಳ ಮನವಿಯಂತೆ ಬಲಿಯನ್ನು ನಿಗ್ರಹಿಸುವಿಕೆಯ ಸಂಕಲ್ಪದಿಂದ. ಸರಿ; ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡಿದನು. ಬಲಿಯ ಗುರು ಶುಕ್ರಾಚಾರ್ಯನು ವಾಮನನ್ನು ವಿಷ್ಣುವೆಂದು ಹೇಳಿದರೂ ಬಲಿಯು ಲಕ್ಷ್ಯ ಮಾಡಲಿಲ್ಲ; ಒಪ್ಪಿದನು. ವಾಮನನು ತ್ರಿವಿಕ್ರಮನಾಗಿ ಬೆಳೆದನು. ಎರಡು ಹೆಜ್ಜೆಗಳಿಂದ ಭೂಮಿ, ಸ್ವರ್ಗ ಲೋಕಗಳನ್ನು ಅಳೆದನು. ಆ ಹೊತ್ತಿಗೆ ವಾಮನನ ಮಹತ್ವದ ಅರಿವಾಗಿದ್ದ ಬಲಿಯು ಕೊನೆಗೆ ಮೂರನೆಯ ಹೆಜ್ಜೆಯನ್ನು ತನ್ನ ತಲೆಯ ಮೇಲೆಯೇ ಇಡಲು ಹೇಳಿ ತನ್ನ ಅಹಂಕಾರದಿಂದ ಬಿಡುಗಡೆಗೊಂಡನು; ಭಗವಂತನ ಪಾದಸ್ಪರ್ಶದಿಂದ ಅವನು ಪುಣ್ಯವಂತನಾದನು. ಸಪ್ತ ಚಿರಂಜೀವಿಗಳಲ್ಲಿ ಒಬ್ಬನೂ ಆದನು. (ಜಗತ್ತಿನ ಏಳು ಜನ ಚಿರಂಜೀವಿಗಳು ಬಲಿ, ಅಶ್ವತ್ಥಾಮ, ವ್ಯಾಸ, ವಿಭೀಷಣ, ಕೃಪ, ಪರಶುರಾಮ ಮತ್ತು ಹನುಮಂತ) ಇಂತಹ ವಾಮನನು ತಪಸ್ಸು ಮಾಡಿದ್ದ ಸಿದ್ಧಾಶ್ರಮಕ್ಕೆ ಶ್ರೀರಾಮಲಕ್ಷ್ಮಣರು ವಿಶ್ವಾಮಿತ್ರರ ಜತೆ ತಲುಪಿದ್ದರು.

ಸಿದ್ಧಾಶ್ರಮದಲ್ಲಿ ಮರುದಿನ ಪ್ರಾರಂಭವಾದ ಯಜ್ಞಕ್ಕಾಗಿ ವಿಶ್ವಾಮಿತ್ರರು ಯಾಗ ದೀಕ್ಷೆ ಸ್ವೀಕರಿಸಿದರು. ಆರನೆಯ ಪೂರ್ಣಾಹುತಿಯ ದಿನ ಬಂದಿತು. ಅಗ್ನಿ ಕುಂಡದ ಕನ್ನಾಲಿಗೆಗಳು ಮುಗಿಲೆತ್ತರಕ್ಕೆ ಚಾಚಿದಂತೆಲ್ಲಾ ಸುಬಾಹು, ಮಾರೀಚರು ತಮ್ಮ ರಾಕ್ಷಸ ಪಡೆಯೊಂದಿಗೆ ಧಾವಿಸಿ ಬಂದು

ಯಜ್ಞ ಮಂಟಪದ ಮೇಲೆ ಕೆಟ್ಟ ಮಾಂಸ, ರಕ್ತ ಸುರಿಯಲು ಸಿದ್ಧರಾಗುತ್ತಿದ್ದಂತೆಯೇ ಎಚ್ಚರದಿಂದ ಕಾಯುತ್ತಿದ್ದ ಶ್ರೀರಾಮನ ಮಾನವಾಸ್ತ್ರವನ್ನು ಹೂಡಿ ಮಾರೀಚನು ನೂರು ಯೋಜನಗಳ ದೂರದ ಸಮುದ್ರ ತೀರಕ್ಕೆ ಹೋಗಿ ಬೀಳುವಂತೆ ಗುರಿಯಿಟ್ಟು ಹೊಡೆದನು. ಪುನಃ ಆಗ್ನೇಯಾಸ್ತ್ರದಿಂದ ಶ್ರೀರಾಮನು ಸುಬಾಹುವನ್ನು ಕೊಂದನು; ವಾಯುವ್ಯಾಸ್ತ್ರ ಹೂಡಿ ಉಳಿದ ರಾಕ್ಷಸರನ್ನು ಕೊಂದು ಹಾಕಿದನು. ವಿಶ್ವಮಿತ್ರರ ಯಜ್ಞವು ಯಶಸ್ವಿಯಾಗಿ ನೆರವೇರಿತು. ಮರುದಿನ ವಿಶ್ವಾಮಿತ್ರರೊಡನೆ ಶ್ರೀರಾಮಲಕ್ಷ್ಮಣರು ವಿಶ್ವಾಮಿತ್ರರು ಮತ್ತಿತರರ ಋಷಿಗಳ ಅಪೇಕ್ಷೆಯಂತೆ ಮಿಥಿಲೆಯಲ್ಲಿ ಜನಕನ ಯಾಗವೊಂದರ ಸಂದರ್ಭಕ್ಕೆ, ಅಲ್ಲಿದ್ದ ವಿಶಿಷ್ಟ ಶಿವ ಧನುಸ್ಸನ್ನು ನೋಡಲು ಹೊರಟರು.

ಮಿಥಿಲೆಯ ಮಹಾರಾಜನು ಜನಕ. ಅವನು ಆದರ್ಶ ಭೂಪತಿಯಾಗಿದ್ದನು. ಯಾಗವೊಂದನ್ನು ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಯಾಗ ಭೂಮಿಯನ್ನು ತನ್ನ ಕೈಗಳಿಂದಲೇ ಉತ್ತು ಭೂಮಿಯನ್ನು ಪ್ರಾರ್ಥಿಸಬೇಕಿತ್ತು. ಆಗ ನೇಗಿಲಿಗೆ ಸಿಕ್ಕಿದ ಬಂಗಾರದ ಪೆಟ್ಟಿಗೆಯಲ್ಲಿ ಸುಂದರ ಹೆಣ್ಣು ಮಗುವಿದ್ದಿತು. ನೇಗಿಲಿಗೆ ಸಂಸ್ಕೃತದಲ್ಲಿ 'ಸೀತಾ' ಎಂದು ಹೇಳಲಾಗಿದೆ. ಹಾಗಾಗಿ ಆ ಹೆಣ್ಣುಮಗುವಿಗೆ ಸೀತಾ ಎಂದೇ ಹೆಸರಿಸಲಾಯಿತ್ತು. ಆಕೆಯ ಮದುವೆಯ ಕಾಲಕ್ಕೆ ಜನಕನ ಸಂಗ್ರಹದಲ್ಲಿದ್ದ ಪೂರ್ವಜರ ಶಿವಧನುಸ್ಸನ್ನು ಎತ್ತಿ ಬಗ್ಗಿಸಿ, ಅದಕ್ಕೆ ದಾರವನ್ನು ಎಳೆದು ಕಟ್ಟುವವನಿಗೆ ಸೀತೆಯು ತಕ್ಕ ಸತಿಯಾಗುವಳು ಎಂದು ಜನಕನು ನಿರ್ಧರಿಸಿದನು. ಅಸಾಮಾನ್ಯ ಸೀತೆಗೆ ಅಸಾಮಾನ್ಯ ಶಿವಧನುಸ್ಸು ನೆರವಾಗಿ ಕಾಣಿಸಿಕೊಂಡಿತು. ಸೂಕ್ತಸಂದರ್ಭವು ಸೃಷ್ಟಿಯಾಯಿತು. ಜನಕ, ವಿಶ್ವಾಮಿತ್ರರ ಎದುರಿಗೆ ಆ ಹೊತ್ತಿಗೆ ಅನೇಕ ರಣಧೀರರಾದ ರಾಜಕುಮಾರರು ಬಿಲ್ಲು ಎತ್ತಲು ವಿಫಲರಾಗಿದ್ದರು. ವಿಶ್ವಾಮಿತ್ರರ ಅನುಮತಿ ಪಡೆದು ಶ್ರೀರಾಮನು ಬಿಲ್ಲಿಗೆ ಕೈಹಾಕಿ ಮಧ್ಯಭಾಗವನ್ನು ಹಿಡಿದು ಎತ್ತಿ, ಬಿಲ್ಲಿನ ಮೇಲ್ಭಾಗವನ್ನು ಬಾಗಿಸಿ ಕೆಳಗಿದ್ದ ದಾರವನ್ನು ಎತ್ತಿ ಬಗ್ಗಿಸಿದ ಮೇಲ್ಭಾಗಕ್ಕೆ ಕಟ್ಟಲು ಯತ್ನಿಸಿದನು. ಆ ಪ್ರಕ್ರಿಯೆಯಲ್ಲಿ ಬಿಲ್ಲು ಎರಡು ತುಂಡಾಯಿತು. ಶ್ರೀ ರಾಮನು ತಂದೆ ದಶರಥನ ಸಮಕ್ಷಮದಲ್ಲಿ ಸೀತೆಯನ್ನು ವಿವಾಹವಾದನು. ಇದೇ ಸಂದರ್ಭದಲ್ಲಿ ವಿಶ್ವಾಮಿತ್ರ, ವಸಿಷ್ಠರ ಮನವಿಯಂತೆ ಜನಕನ ಮಗಳು ಊರ್ಮಿಳೆಯನ್ನು ಲಕ್ಷಣನಿಗೆ, ಜನಕನ ತಮ್ಮನಾದ ಕುಶಧ್ವಜನ ಮಕ್ಕಳಾದ ಮಾಂಡವಿಯನ್ನು ಭರತನಿಗೂ ಶೃತಕೀರ್ತಿಯನ್ನು ಶತ್ರುಘ್ನನಿಗೂ ಕೊಟ್ಟು ಮದುವೆ ಮಾಡಿದನು. ಶ್ರೀರಾಮನು ಪರಶುರಾಮನೊಂದಿಗಿನ ಮುಖಾಮುಖಿಯೊಂದಿಗೆ ಅಯೋಧ್ಯೆಗೆ ಹಿಂತಿರುಗಿದನು. ನಂತರ ಎಲ್ಲರೂ ಸಂತಸದಿಂದಿದ್ದರು. ದಶರಥನ ಸಂತೋಷಕ್ಕೆ ಪಾರವೇ ಇರಲಿಲ್ಲ. ೧೨ ವರ್ಷಗಳು ಕಳೆದವು.

ಅಯೋಧ್ಯಾಕಾಂಡ


ಪರಿಪೂರ್ಣ ವ್ಯಕ್ತಿತ್ವದ ಶ್ರೀರಾಮನು ಎಲ್ಲರೊಂದಿಗೆ ಅನ್ಯೋನ್ಯತೆಯಿಂದಿದ್ದನು. ಮಹಾಪರಾಕ್ರಮಿಯೂ, ವೇದವಿದ್ವಾಂಸನೂ, ವಿನಯಿಯೂ ಆಗಿದ್ದ ಅವನಿಗೆ ಕಾವ್ಯ, ಸಂಗೀತ ನಾಟಕ ಇತ್ಯಾದಿ ಲಲಿತಕಲೆಗಳಲ್ಲಿಯೂ ಪಾಂಡಿತ್ಯವಿದ್ದಿತು. ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಿ ತಾನು ವಾನಪ್ರಸ್ಥ ಆಶ್ರಮವಾಸಿಯಾಗಬೇಕೆಂದು ದಶರಥನು ಚಿಂತಿಸಿದನು. ಸಂಬಂಧಿಸಿದ ಎಲ್ಲರೊಂದಿಗೆ ಸಮಾಲೋಚಿಸಿ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಲು ನಿರ್ಧರಿಸಿದನು; ಶ್ರೀ ರಾಮನಿಗೆ ತಿಳಿಸಿದನು. ವಿನಮ್ರತೆಯಿಂದ ಶ್ರೀರಾಮನು ತಂದೆಯ ನಿರ್ಣಯವನ್ನು ಒಪ್ಪಿದನು. ಕೌಸಲ್ಯೆಯೇ ಅಲ್ಲದೆ ಇಡೀ ಅಯೋಧ್ಯೆಯೇ ಸಡಗರಗೊಂಡಿತು. ಪಟ್ಟಾಭಿಷೇಕದ ದಿನವು ಬಂದಿತು. ಆ ದಿನದ ಮಂಗಳಕರ ಮುಂಬೆಳಗಿಗಾಗಿ ಇಡೀ ಅಯೋಧ್ಯೆಯೇ ಕಾತುರಗೊಂಡಿತ್ತು. ಮಂಥರೆಯ ಸವತಿ ಮತ್ಸರದ ಮಾತುಗಳ ವಿಷಬೀಜವು ಬಿತ್ತಲ್ಪಟ್ಟು ಕೈಕೇಯಿ ಕೋಪಗೃಹ ಬಂಧಿಯಾದಳು. ಆಭರಣ,

ಅಲಂಕಾರಗಳನ್ನು ಕಿತ್ತೆಸೆದು ನೆಲದತ್ತ ಬಿದ್ದು ಆಕ್ರೋಷದ ಕಿಡಿ ಹತ್ತಿಸಿಕೊಂಡಳು. ಅವಳಲ್ಲಿಗೆ ಬಂದ ದಶರಥನು ಕೋಪಗೃಹವನ್ನು ಪ್ರವೇಶಿಸಿದನು. ಕೈಕೇಯಿಯ ನಾಟಕೀಯ ನೋವಿಗೆ ಕಳವಳಿಸಿದನು. ಶ್ರೀರಾಮನ ಆಣೆ ನಿನ್ನ ಆಸೆಗಳೆಲ್ಲವನ್ನೂ ನೆರವೇರಿಸುವುದಾಗಿ ಆಣೆಯಿಟ್ಟನು. ಕೈಕೇಯಿ ಇದೇ ಸಮಯವೆಂದು ಕಠೋರಳಾಗಿ ಆ ಹಿಂದೆ ದೇವಾಸುರರ ಸಂಗ್ರಾಮದಲ್ಲಿ ಕೊಟ್ಟಿದ್ದ ಎರಡು ವರಗಳ ಸಂದರ್ಭ ನೆನಪಿಸಿ ಮೊದಲನೆಯವರವಾಗಿ "ರಾಮನ ಪಟ್ಟಾಭಿಷೇಕಕ್ಕೆ ಮಾಡಿರುವ ಸಿದ್ಧತೆಗಳಿಂದಲೇ ಮಗ ಭರತನಿಗೆ ಯುವರಾಜ ಪಟ್ಟಾಭಿಷೇಕವಾಗಬೇಕು" ಎಂದೂ, ಎರಡನೆಯ ವರವಾಗಿ "ರಾಮನು ನಾರುಬಟ್ಟೆಯನ್ನುಟ್ಟು, ಜಟಾಧಾರಿಯಾಗಿ ಹದಿನಾಲ್ಕು ವರ್ಷ ದಂಡಕಾರಣ್ಯಕ್ಕೆ ಹೋಗಬೇಕು" ಎಂದು ಕೇಳಿದವಳೇ "ಈ ವರಗಳನ್ನು ನಡೆಸಿಕೊಡದಿದ್ದಲ್ಲಿ ಇಂದೇ ಪ್ರಾಣ ಬಿಡುವೆ" ಎಂದಳು. ನಂತರದ ಬೆಳವಣಿಗೆಗಳಿಂದ ಶ್ರೀರಾಮನು ಅರಣ್ಯವಾಸಕ್ಕೆ ಸಿದ್ಧನಾದನು. ಪ್ರಶಾಂತವಾಗಿ ರಾಜಗೌರವ ತ್ಯಜಿಸಿ ತಾಯಿ ಕೌಸಲ್ಯೆ ಲಕ್ಷ್ಮಣರನ್ನು ಸಮಾಧಾನಿಸಿ, ತಾಯಿಯ ಆಶೀರ್ವಾದ ಪಡೆದು ಲಕ್ಷ್ಮಣ, ಸೀತೆಯರೊಂದಿಗೆ ಅರಣ್ಯವಾಸಕ್ಕೆ ಹೊರಟನು. ರಾಜವಸ್ತ್ರ ತ್ಯಜಿಸಿ, ನಾರುಬಟ್ಟೆ ಧರಿಸಿ ಪುರಜನರ ಗೋಳಾಟದ ನಡುವೆ ಮಂತ್ರಿ ಸುಮಂಥ್ರನ ರಥದಲ್ಲಿ ಶ್ರೀರಾಮನು ಹೊರಟನು. ಪ್ರಜೆಗಳೆಲ್ಲರೂ ಭರತನ ಆದೇಶಗಳನ್ನು ಪಾಲಿಸಬೇಕೆಂದು ಮನವಿ ಮಾಡಿದನು.

ರಥವು ಮುಸ್ಸಂಜೆಯ ಹೊತ್ತಿಗೆ ಗಂಗಾನದಿ ತೀರದ ಶೃಂಗಿವೇರಪುರವನ್ನು ತಲುಪಿತು. ಅಲ್ಲಿನ ಬೇಡರನಾಯಕ, ಶ್ರೀರಾಮನ ಆಪ್ತಮಿತ್ರನಾಗಿದ್ದ ಗುಹನು ಶ್ರೀರಾಮನನ್ನು ನೋಡಲು ಬಂದನು. ಮರುದಿನ ಸುಮಂತ್ರನನ್ನು ಅಯೋಧ್ಯೆಗೆ ಕಳುಹಿಸಿದ ಶ್ರೀರಾಮನು ಲಕ್ಷಣ ಸೀತೆಯರೊಂದಿಗೆ ಗುಹನು ಕೊಟ್ಟ ದೋಣಿಯಲ್ಲಿ ಗಂಗಾನದಿಯ ದಡವನ್ನು ತಲುಪಿದನು. ಭಾರಧ್ವಾಜರ ಆಶೀರ್ವಾದ, ವಾಲ್ಮೀಕಿಯ ಆತಿಥ್ಯ ಸ್ವೀಕರಿಸಿ ಮುಂದೆ ಚಿತ್ರಕೂಟದ ಪ್ರಕೃತಿ ಸೌಂದರ್ಯದ ಆನಂದವನ್ನು ಅನುಭವಿಸಿದರು.

ಈ ಹೊತ್ತಿಗೆ ಅತ್ತ ಅಯೋಧ್ಯೆಯಲ್ಲಿ ದಶರಥನು ಶ್ರವಣ ಕುಮಾರನ ತಂದೆಯ ಶಾಪದಂತೆ ದಶರಥನು ತನ್ನ ಪುತ್ರ ಶೋಕದಿಂದ ರಾಮನಾಮವನ್ನು ಜಪಿಸುತ್ತಲೇ ಹಿಂದಕ್ಕೆ ಒರಗಿ ಈ ಲೋಕದ ನೋವುಗಳಿಂದ ಮುಕ್ತನಾದನು. ಶ್ರೀರಾಮ, ಲಕ್ಷ್ಮಣ, ಸೀತೆಯವರುಗಳ ಅರಣ್ಯವಾಸದಿಂದ ಆತಂಕ, ಅಸಮದಾನಗೊಂಡ ಭರತನು ಪ್ರಯಾಗಕ್ಕೆ ಹೋಗಿ ವಸಿಷ್ಠ, ಭರದ್ವಾಜರ ಅನುಮತಿ ಪಡೆದು ಜನಸ್ತೋಮದೊಡನೆ ಚಿತ್ರಕೂಟದತ್ತ ಹೊರಟನು.

ಚಿತ್ರಕೂಟದಲ್ಲಿ ಶ್ರೀರಾಮ ಮತ್ತು ಭರತರ ಮಿಲನವಾಯಿತು. ಶ್ರೀರಾಮನಿಂದ ಪಿತೃತರ್ಪಣ ಸಂದಿತು. ಶ್ರೀರಾಮನ ಅಚಲ ಧರ್ಮ ನಿಷ್ಠೆ ಮತ್ತು ಭರತನ ವಿನಯ ಸಂಪತ್ತಿನ ಕಾರಣಗಳಿಂದಾಗಿ ಅಯೋಧ್ಯೆಗೆ ಶ್ರೀರಾಮನು ಹಿಂತಿರುಗದೆ ವಸಿಷ್ಠರ ಪರಿಹಾರದಂತೆ ಶ್ರೀರಾಮನ ಪಾದುಕೆಗಳೊಂದಿಗೆ ಭರತನು ಅಯೋಧ್ಯೆಗೆ ಹಿಂತಿರುಗಿದನು. ಅಯೋಧ್ಯೆಯಲ್ಲಿ ಶ್ರೀರಾಮನ ಪಾದುಕೆಗಳಿಗೆ ಪಟ್ಟಾಭಿಷೇಕವಾಯಿತು. ಭರತನ ಹಿಂತಿರುಗಿದ ನಂತರ ಭಾರವಾದ ಹೃದಯದಿಂದ ಶ್ರೀರಾಮ ಲಕ್ಷ್ಮಣ ಸೀತೆಯರು ಚಿತ್ರಕೂಟ ತೊರೆದು ನಡೆದು ಸಂಜೆಯ ಹೊತ್ತಿಗೆ ಅತ್ರಿ ಮಹರ್ಷಿಗಳ ಆಶ್ರಮ ಪ್ರವೇಶಿಸಿದರು. ಅತ್ರಿ ಅನಸೂಯೆಯರ ಆತಿಥ್ಯದಿಂದ ಸಂತೋಷಗೊಂಡರು. ಅನುಸೂಯೆಗೆ ದೈವಾನುಗ್ರಹದಿಂದ ದೊರೆತಿದ್ದ ಆಭರಣ ವಸ್ತ್ರಗಳನ್ನು ಆಕೆಯು ಸೀತೆಗೆ ಪ್ರೀತಿಯಿಂದ ಅಲಂಕರಿಸಿದಳು. ಅಂದು ರಾತ್ರಿ ಅಲ್ಲಿಯೇ ಉಳಿದ ಮೂವರೂ ಮರುದಿನ ದಂಡಕಾರಣ್ಯ ಪ್ರವೇಶಿಸುವ ಬಗ್ಗೆ ಅತ್ರಿ ಮಹರ್ಷಿಯಿಂದ ವಿವರ ಪಡೆದರು. ಕ್ರೂರ ಜಂತು, ಘೋರ ಪ್ರಾಣಿಗಳು ಇರುವ ಭಯಂಕರ ದಂಡಕಾರಣ್ಯದಲ್ಲಿ ಮನುಷ್ಯರನ್ನೇ ತಿನ್ನುವ ರಾಕ್ಷಸರು ಇದ್ದಾರೆಂದು ಅತ್ರಿ ತಿಳಿಸಿದರು. ಮರುದಿನ ಶ್ರೀರಾಮ, ಲಕ್ಷ್ಮಣ ಸೀತೆಯರು ದಂಡಕಾರಣ್ಯ ಪ್ರವೇಶಿಸಿದರು.


ದೇವನಹಳ್ಳಿ
ಶ್ರೀ ಚೆನ್ನ ಕೇಶವ ಆಚಾರ್ಯರ
ರೇಖಾರಾಮಾಯಣ



ಮಂಥರೆ, ರಾಣಿಯರೇ ಅಲ್ಲದೆ ವಿಶ್ವಾಮಿತ್ರ ಮತ್ತು ಪ್ರಧಾನಿಯವರೊಂದಿಗೆ ದಶರಥ ಮಹಾರಾಜನು



ಪುತ್ರಕಾಮೇಷ್ಟಿಯಾಗದ ಬಗ್ಗೆ ಚರ್ಚಿಸುತ್ತಿರುವ ದಶರಥ ಮತ್ತು ರಾಣಿಯರು



ರೇಖಾ ರಾಮಾಯಣ



ಇಂದ್ರನು ಶೃಂಗಋಷಿಯನ್ನು ಕರೆತರಲು ರಂಭಾ ಮೊದಲಾದವರಿಗೆ ಸೂಚಿಸುತ್ತಿರುವಿಕೆ




ರಂಭಾ ಮೊದಲಾದವರ ಯಾನವು ಶೃಂಗಋಷಿಗಳನ್ನು ಕರೆತರಲು ಸಪ್ತ ಸಮುದ್ರಗಳನ್ನು ದಾಟುತ್ತಿರುವಿಕೆ


శ్రీ సప్త సముద్రములు దాటియు
దిగుటయును


ఆశ్రమం





ರೇಖಾ ರಾಮಾಯಣ


రంభాదులు గానము
ఓం







ಋಷ್ಯ ಶೃಂಗರು ನಿದ್ರಿಸುತ್ತಿರುವಿಕೆ



ರಂಭಾದಿಗಳು ಶೃಂಗರನ್ನು ಕರೆತರಲು ಸಾಧ್ಯವಾಗದ್ದರ ಬಗ್ಗೆ ಸುಮಂತನಿಗೆ ತಿಳಿಸುತ್ತಿರುವಿಕೆ




ಚಿಂತೆಯಲ್ಲಿ ದಶರಥ ಮತ್ತು ರಾಣಿಯರು; ಶೃಂಗರನ್ನು ಕರೆತರಲು ಮರುಚಿಂತನೆ




ಶೃಂಗರ ಆಶ್ರಮದಲ್ಲಿ ರಂಭಾದಿ ಅಪ್ಸರೆಯರು ಷಡ್ರಸಗಳ ಭಕ್ಷ್ಯಗಳನ್ನು ಹೊರತೆಗೆಯುತ್ತಿರುವುದು



ರೇಖಾ ರಾಮಾಯಣ




ರೇಖಾ ರಾಮಾಯಣ



ಶೃಂಗರು ಮಧುರಾತಿ ಮಧುರ ರಸಭರಿತ ಫಲಗಳ ಭಕ್ಷಣೆ; ರಂಭಾದಿಗಳು ಕದ್ದು ನೋಡುತ್ತಿರುವಿಕೆ



ರಂಭಾದಿ ಅಪ್ಸರೆಯರು ಶೃಂಗರಿಗೆ ಅಯೋಧ್ಯೆಯ ದಾರಿ ತೋರುವಿಕೆ: ಹೊರಡುವಿಕೆ



ರೇಖಾ ರಾಮಾಯಣ



ಸಪ್ತಸಾಗರಗಳನ್ನು ರಂಭಾದಿಗಳು ದಾಟುತ್ತಿರುವಿಕೆ



ಸನಕ, ಸನಂದ ಮುನಿಗಳು ಮತ್ತು ದಶರಥನ ಕುಟುಂಬದೊಂದಿಗೆ ಋಷ್ಯಶೃಂಗರು




ಪುತ್ರ ಕಾಮೇಷ್ಟಿಯಾಗದಲ್ಲಿ ನಿರತ ಋಷ್ಯ ಶೃಂಗರೊಂದಿಗೆ ಮಾಂಡವ್ಯ, ಬೃಹಸ್ಪತಿ, ವಸಿಷ್ಟ, ವಿಶ್ವಾಮಿತ್ರ, ಸನಕ, ಸನಂದರು


మంథర
శ్రీదశరథులు
భార్యలు
పూర్ణగర్భధారణాలుస్త్రీలు



ರೇಖಾ ರಾಮಾಯಣ



ಪಂಪಾ ಸರೋವರದಲ್ಲಿ ವಿಶ್ವಾಮಿತ್ರ ಮುನಿಗಳು ರಾಮಲಕ್ಷ್ಮಣರಿಗೆ ಬಲ–ಅತಿಬಲ ವಿದ್ಯೆಗಳನ್ನು ಬೋಧಿಸುತ್ತಿರುವುದು



ರೇಖಾ ರಾಮಾಯಣ





ಸೀತಾರಾಮರ ಕಲ್ಯಾಣ

೨. ಅರಣ್ಯಕಾಂಡ

ದಂಡಕಾರಣ್ಯವು ಋಷಿಮುನಿಗಳ ಆಶ್ರಮಗಳಿಂದ ಕಂಗೊಳಿಸುತ್ತಿತ್ತು. ಆ ಹೊತ್ತಿಗೆ ಅಲ್ಲಿನ ತಪಸ್ವಿಗಳು ರಾಕ್ಷಸರಿಂದ ಉಂಟಾಗುತ್ತಿದ್ದ ತೊಂದರೆಗಳನ್ನು ವಿವರಿಸಿ ತಮ್ಮನ್ನು ಅವರಿಂದ ರಕ್ಷಿಸಬೇಕೆಂದು ಶ್ರೀರಾಮನಿಗೆ ಮನವಿ ಮಾಡಿಕೊಂಡರು; ರಾಮಲಕ್ಷ್ಮಣರು ಅವರಿಗೆ ಅಭಯವಿತ್ತರು. ಹೀಗೆ ಹೋಗುವಾಗ ಅವರೆದುರಿಗೆ ಬೆಟ್ಟದಂತಹ ವಿರಾಧನೆಂಬ ರಾಕ್ಷಸನು ತನ್ನ ಕ್ರೌರ್ಯ ರೂಪ, ಮಾತು, ನಡವಳಿಕೆಗಳಿಂದ ಕಾಣಿಸಿಕೊಂಡನು. ಹಿಡಿದೆತ್ತಿ ತನ್ನ ಭುಜದ ಮೇಲೆ ಕೂರಿಸಿಕೊಂಡು ಹೊರಡಲನುವಾದನು. ಕೋಪಗೊಂಡ ಶ್ರೀರಾಮನು ಅವನ ಕಾಲುಗಳನ್ನು, ಲಕ್ಷ್ಮಣನು ಅವನ ಕೈಗಳನ್ನು ಕತ್ತರಿಸಿದರು; ಅವನು ಸಾಯಲಿಲ್ಲ. ಹಿಂದೆ ತುಂಬುರ ಎಂಬ ಗಂದರ್ವನಾಗಿದ್ದ ವಿರಾಧನು ಕುಬೇರನ ಶಾಪದಿಂದ ಈ ದುರ್ಗತಿಗೆ ಪಾತ್ರನಾಗಿದ್ದನು. ಅವನು ಧರೆಗುರಳಿದಾಗ ಶ್ರೀರಾಮನು ಅವನ ಕುತ್ತಿಗೆಯ ಮೇಲೆ ಕಾಲಿಟ್ಟನು. ನಂತರ ಶ್ರೀರಾಮನು ವಿರಾಧನ ಮನವಿಯಂತೆ ಅವನನ್ನು ಸಮಾಧಿ ಮಾಡಿದನು.

ಆಗ ವಿಕೃತ ಶರೀರದಿಂದ ಮುಕ್ತನಾದ ವಿರಾಧನು ಗಂದರ್ವ ಶರೀರಿಯಾದನು; ರಾಮನಿಂದ ಪಾವನನಾದನು. ಮುಂದೆ ಮೂವರೂ ಅಗಸ್ತ್ಯರ ಅತಿಥಿಗಳಾದರು. ಆಶ್ರಮದ ಉಪಚಾರದ ನಂತರ ರಾಮನ ಬರುವಿಕೆಗಾಗಿಯೇ ಆವರೆಗೆ ಕಾದಿದ್ದ ಅಗಸ್ತ್ಯರು ವಿಷ್ಣುವು ವಿಶ್ವಕರ್ಮನಿಗಾಗಿ ಸೃಷ್ಟಿಸಿದ್ದ ಬಿಲ್ಲು ಮತ್ತು ಇಂದ್ರನ ಅಕ್ಷಯ ಬತ್ತಳಿಕೆಗಳನ್ನು ರಾಮನಿಗೆ ಕೊಟ್ಟರು. ವಿನಯದಿಂದ ಸ್ವೀಕರಿಸಿದ ರಾಮನಿಗೆ ಅಗಸ್ತ್ಯರು "ವಿಷ್ಣುವು ಈ ಬಿಲ್ಲಿನಿಂದಲೇ ರಾಕ್ಷಸರನ್ನು ಸಂಹರಿಸಿರುವನು, ನೀನೂ ಧರ್ಮ ಸಂರಕ್ಷಣೆಗೆ ಈ ಬಿಲ್ಲು ಮತ್ತು ಬತ್ತಳಿಕೆಗಳನ್ನು ಬಳಸು ನಿನಗೆ ವಿಜಯಲಕ್ಷ್ಮಿಯು ಒಲಿಯಲಿ" ಎಂದರು. ನಂತರ ಶ್ರೀರಾಮಲಕ್ಷ್ಮಣ ಸೀತೆಯರು ಪಂಚವಟಿಗೆ ತೆರಳಿದರು. ಪಂಚವಟಿಯು ಗೋದಾವರಿ ನದಿಯ ಹರಿವಿನಲ್ಲಿದ್ದಿತು. ಸುಂದರ ಭೂದೃಶ್ಯ ಲೋಕವು ಅದು. ಹಣ್ಣು-ಹಂಪಲುಗಳ ಆಗರ, ರಮ್ಯ ಸೌಂದರ್ಯದ ಮಡುವಿನಲ್ಲಿ ಪಂಚವಟಿಯಿದ್ದಿತು. ಆಹಾದಿಯಲ್ಲಿ ತನ್ನ ತಂದೆಯ ಹಳೆಯ ಗೆಳೆಯನಾದ ಜಟಾಯು ಪಕ್ಷಿಯನ್ನು ರಾಮನು ನೋಡಿ ಸ್ನೇಹಬೆಳೆಸಿದನು. ರಾಮಲಕ್ಷ್ಮಣರ ಅನುಪಸ್ಥಿತಿಯಲ್ಲಿ ಸೀತೆಯನ್ನು ತಾನು ರಕ್ಷಣೆ ಮಾಡುವುದಾಗಿ ಅದು ಮನವಿ ಮಾಡಿತು. ರಾಮನು ಒಪ್ಪಿದನು. ಪಂಚವಟಿಯಲ್ಲಿ ಅರಣ್ಯವಾಸದ ಕೊನೆಯದಿನಗಳನ್ನು ಕಳೆಯಲು ಸೂಕ್ತ ಸ್ಥಳವನ್ನು ಆಯ್ಕೆ ಮಾಡಿಕೊಂಡು ಪರ್ಣಶಾಲೆಯನ್ನು ಲಕ್ಷ್ಮಣನು ನಿರ್ಮಿಸಿದನು; ದಿನಗಳು ಉರುಳಿದವು.

ಚಳಿಗಾಲದ ಮೋಡಗಳು ಸರಿದುಹೋದವು; ಸೂರ್ಯನು ಕಾಣಿಸಿಕೊಂಡನು. ಒಂದು ದಿನ ಕಾಡಿನ ಮರಗಳ ಮಧ್ಯದಿಂದ ಶೂರ್ಪಣಖಿ ಎಂಬ ರಾಕ್ಷಸಿಯು ಕಾಣಿಸಿಕೊಂಡಳು. ಅವಳು ಲಂಕೆಯ ರಾಜ, ರಾವಣನ ತಂಗಿ. ದಂಡಕಾರಣ್ಯದ ಜನಸ್ಥಾನವು ರಾವಣನ ಹಿಡಿತದಲ್ಲಿತ್ತು. ಹಾಗಾಗಿ ಅಲ್ಲಿ ರಾವಣನ ಬಂಧುಗಳು ಖರ, ದೂಷಣರು ಹದಿನಾಲ್ಕು ಸಾವಿರ ರಾಕ್ಷಸಸೇನೆಯೊಂದಿಗೆ ಬೀಡುಬಿಟ್ಟಿದರು. ಅವರೊಡನೆ ಇದ್ದ ಶೂರ್ಪಣಖಿಯು ಶ್ರೀರಾಮನನ್ನು ಕಂಡು ಮೋಹಗೊಂಡಳು.

ಏಕಪತ್ನೀ ವ್ರತಿಯಾದ ಶ್ರೀರಾಮನು ಅವಳ ಗಮನವು ಲಕ್ಷ್ಮಣನತ್ತ ಹರಿಯುವಂತೆ ಮಾಡಿದನು. ಲಕ್ಷ್ಮಣನು ಶೂರ್ಪಣಖಿಯ ಮೂಗನ್ನು ಭಗ್ನಮಾಡಿದನು. ಚೀತ್ಕರಿಸುತ್ತ ತನ್ನ ಸೋದರರಿದ್ದಲ್ಲಿಗೆ ಬಂದು ರಾಮಲಕ್ಷ್ಮಣರ ಬಗ್ಗೆ ದೂರಿದಳು. ಹದಿನಾಲ್ಕು ಸಾವಿರ ರಾಕ್ಷಸರೊಡನೆ ಅವಳ ಸೋದರರಾದ ಖರ, ದೂಷಣ, ತ್ರಿಶಿರರು ರಾಮನನ್ನು ಹುಡುಕಿ ಬಂದರು. ಭೀಕರ ಕಾದಾಟದಲ್ಲಿ ಖರದೂಷಣಾದಿಗಳು ಧರೆಗುರುಳಿದರು; ಅಕಂಪನ ಎಂಬ ರಾಕ್ಷಸನೊಬ್ಬನು ಓಡಿಹೋದನು. ರಾವಣನ ಆಸ್ಥಾನವನ್ನು ತಲುಪಿದ ಅವನು ನಡುಗುತ್ತ ನಡೆದ ವೃತ್ತಾಂತವನ್ನು ವಿವರಿಸಿದನು. ಎಚ್ಚರಿಕೆಯಿಂದ ಯೋಚಿಸಿ ರಾಮಲಕ್ಷ್ಮಣರನ್ನು ಎದುರಿಸುವಂತೆ ಸಲಹೆ ನೀಡಿದನು. ನಂತರ ಮಾರೀಚನನ್ನು ರಾವಣನು ಅವನ ಆಶ್ರಮದಲ್ಲಿ ಭೇಟಿಯಾದನು.

ವಿಶ್ವಾಮಿತ್ರ ಯಜ್ಞದಲ್ಲಿ ಶ್ರೀರಾಮನಿಂದ ಪಾಠ ಕಲಿತಿದ್ದ ಮಾರೀಚನು ಶ್ರೀರಾಮನ ಅಸಮಾನ್ಯತೆ, ನ್ಯಾಯ ತತ್ಪರತೆಯನ್ನು ವಿವರಿಸಿದನು. ರಾವಣನ ಸೀತಾಪಹರಣದ ಯೋಜನೆ ಕೇಳಿ ಆತಂಕಗೊಂಡನು. ಶ್ರೀರಾಮನ ಕುರಿತ ಮಾರೀಚನ ಮಾತುಗಳನ್ನು ಕೇಳಿ ಲಂಕೆಗೆ ರಾವಣನು ಹಿಂತಿರುಗಿದ ನಂತರ ಕಾಕತಾಳೀಯವೆಂಬಂತೆ ಸಹೋದರಿ ಶೂರ್ಪಣಖಿಯು ತನ್ನ ಅಸಹಾಯಕತೆಯನ್ನು ವಿಕಾರಮುಖವನ್ನೂ ತೋರಿ ರಾಮಲಕ್ಷ್ಮಣರ ಕುರಿತು ಆಕ್ರೋಶವನ್ನೂ, ಸೀತೆಯ ಅನುಪಮ ಸೌಂದರ್ಯವನ್ನೂ ವರ್ಣಿಸಿ ಅವನನ್ನು ಕೆಣಕಿದಳು.

ರಾವಣನು ತಂಗಿಗೆ ಮಾತುಕೊಟ್ಟು, ಮಾರೀಚನನ್ನು ಪುನಃ ಸಂಧಿಸಿ ಅವನನ್ನು ಒತ್ತಾಯಿಸಿ ಬಂಗಾರದ ಜಿಂಕೆಯಂತೆ ಮಾಯಾ ರೂಪ ಧರಿಸಿ ಸೀತೆಯನ್ನು ಆಕರ್ಷಿಸಬೇಕೆಂದು ನಂತರ ರಾಮನನ್ನು ಅವಳಿಂದ ದೂರ ಹೋಗುವಂತೆ ಮಾಡಬೇಕೆಂದೂ ಸೂಚಿಸಿದನು; ರಾಜಾಜ್ಞೆಯೂ ಇದಾಗಿತ್ತು. ಸೀತೆಗಾಗಿ ಬಂಗಾರದ ಜಿಂಕೆಯ ಹಿಂದೆ ಶ್ರೀರಾಮನು ಹೋದರೆ, ಲಕ್ಷ್ಮಣನು ಸೀತೆಯ ರಕ್ಷಣೆಗೆ ನಿಂತನು. ಮಾಯಜಿಂಕೆಯಾಗಿದ್ದ ಮಾರೀಚನು ಶ್ರೀರಾಮನ ಬಿಲ್ಲಿಗೆ ಬಲಿಯಾಗಿ 'ಹಾ ಸೀತೆ! ಹಾ ಲಕ್ಷ್ಮಣ' ಎಂದು ಕೂಗಿ ಸತ್ತನು. ಈ ಕೂಗನ್ನು ಕೇಳಿ ಶ್ರೀರಾಮನು ನಿಜವಾಗಿಯೇ ತೊಂದರೆಯಲ್ಲಿರುವನೆಂದು ಭಾವಿಸಿ ಗಾಬರಿಗೊಂಡ ಸೀತೆಯು ಒತ್ತಾಯದಿಂದ ಲಕ್ಷ್ಮಣನನ್ನು ಶ್ರೀರಾಮನ ರಕ್ಷಣೆಗೆಂಬಂತೆ ಕಳುಹಿಸಿಕೊಟ್ಟಳು. ಆಕೆಯ ಒತ್ತಾಯದಿಂದ ಹೊರಟ ಲಕ್ಷ್ಮಣನಿಗೆ ಶ್ರೀರಾಮನನ್ನು ಕಂಡು ನಿಜಸ್ಥಿತಿಯ ಅರಿವಾಯಿತು. ಅವನ ಊಹೆಯು ಸರಿಯೇ ಆಗಿತ್ತು. ಆದರೆ ಆ ಹೊತ್ತಿಗೆ ಸಂನ್ಯಾಸಿಯ ರೂಪದಲ್ಲಿ ಸೀತೆಯನ್ನು ಅಪಹರಿಸಿಲು ಬಂದಿದ್ದ ರಾವಣನು ಸೀತೆಯ ಸೌಂದರ್ಯಕ್ಕೆ ಹುಚ್ಚನಾಗಿ ತನ್ನ ನಿಜರೂಪದಲ್ಲಿ ಕಾಣಿಸಿಕೊಂಡು ಆಕೆಯ ಪ್ರತಿಭಟನೆಯನ್ನು ಲೆಕ್ಕಿಸದೆ ಬಲಾತ್ಕಾರದಿಂದ ತನ್ನ ರಥದತ್ತ ಎಳೆದೊಯ್ದು ಆಕಾಶಮುಖನಾದನು. ಅಡ್ಡ ಬಂದ ವೃದ್ಧ ಜಟಾಯುವನ್ನು ಹೊಡೆದುರುಳಿಸಿದನು. ಜಟಾಯುವು ಶ್ರೀರಾಮಲಕ್ಷ್ಮಣರಿಗಾಗಿ ಪ್ರಾಣ ಹಿಡಿದು ಕಾಯಲಾರಂಭಿಸಿತು. ಲಕ್ಷ್ಮಣನೊಂದಿಗೆ ಮುಖಾಮುಖಿಯಾಗಿ ಅಪಾಯದ ಮುನ್ಸೂಚನೆ ಅರಿತ ಶ್ರೀರಾಮನು ಸೀತೆಯಿಲ್ಲದ ಶೂನ್ಯ ಕುಟೀರವನ್ನು ಕಂಡನು. ಸೀತೆಯನ್ನು ಅರಸುತ್ತಾ ಜಟಾಯುವಿನಿಂದ ವಿಷಯ ತಿಳಿದು ಆತಂಕಗೊಂಡ ರಾಮಲಕ್ಷ್ಮಣರು ಜಟಾಯುವಿನ ಪ್ರಾಣತ್ಯಾಗದ ನಂತರ ಅಂತ್ಯ ಸಂಸ್ಕಾರವನ್ನೂ ಮಾಡಿದರು. ಪರಿಪೂರ್ಣತೆಯತ್ತ ಸಾಗುತ್ತಿದ್ದ ವ್ಯಕ್ತಿತ್ವವು ಶ್ರೀ ರಾಮನದಾಗಿತ್ತು. ಎಲ್ಲ ಸಂದರ್ಭಗಳನ್ನೂ ಸಮಚಿತ್ತದಿಂದ ಸ್ವಾಗತಿಸುತ್ತಲೇ ಲಕ್ಷ್ಮಣನೊಂದಿಗೆ ಸೀತೆಯನ್ನು ಹುಡುಕುವುದರಲ್ಲಿ ನಿರತನಾಗಿದ್ದನು.

ಒಮ್ಮೆ ದಟ್ಟವಾದ ಗೋಂಡಾರಣ್ಯದಲ್ಲಿ ಸಾಗಿದ್ದ ರಾಮಲಕ್ಷ್ಮಣರಿಗೆ ಅಯೋಮುಖಿ ಎಂಬ ರಕ್ಕಸಿಯು ಎದುರಾದಳು. ಲಕ್ಷ್ಮಣನನ್ನು ಹಿಡಿದು 'ನಾವಿಬ್ಬರೂ ಆನಂದದಿಂದ ವಿಹರಿಸೋಣ' ಎಂದಳು ಕ್ರೋಧಗೊಂಡ ಲಕ್ಷ್ಮಣನು ಅವಳ ಕಿವಿ, ಮೂಗುಗಳನ್ನು ಕತ್ತರಿಸಿದನು. ಅವಳು ಅಡವಿಯೊಳಗೋಡಿದಳು. ಸ್ವಲ್ಪ ಹೊತ್ತಿಗೇ ದೊಡ್ಡ ದೇಹದ ರಾಕ್ಷಸನೊಬ್ಬನು ಈ ಇಬ್ಬರಿಗೆ ಎದುರಾದನು. ಅವನ ದೇಹಕ್ಕೆ ಕಾಲು, ಕುತ್ತಿಗೆ, ತಲೆಗಳೇ ಇರಲಿಲ್ಲ. ಅವನ ವಿಕಾರ ಬೃಹದ್ ದೇಹದ ಎದೆಯ ಭಾಗದಲ್ಲಿ ಗುಹೆಯಂತಹ ಬಾಯಿಯು ಇದ್ದಿತು. ಎರಡು ಉದ್ದವಾದ ತೋಳುಗಳಿದ್ದವು. ಆ ತೋಳುಗಳನ್ನು ಚಾಚಿ ಎದುರಿಗೆ ಸಿಕ್ಕಿದ ಪ್ರಾಣಿಗಳನ್ನು ಹಿಡಿಯುತ್ತಿದ್ದನು. ಅವನ ತುಟಿಗಳು ವಿಕಾರವಾಗಿದ್ದವು. ಚೂಪಾಗಿದ್ದ ಹಲ್ಲುಗಳು ಒಳಗೆ ಹೋದ ಪ್ರಾಣಿಗಳನ್ನು ಸುಲಭವಾಗಿ ಕತ್ತರಿಸಿ ಹಾಕುತ್ತಿದ್ದುವು. ಬಾಯಿಯ ಮೇಲೆ ಕಂಪಾದ ಒಂದು ಕೆಟ್ಟ ಕಣ್ಣು ಇದ್ದಿತು. ಇವನೇ ಕಬಂಧ ಅವನ ಅಸಾಮಾನ್ಯ ಬಾಹುಗಳಲ್ಲಿ ರಾಮಲಕ್ಷ್ಮಣರು ಬಂಧಿತರಾದರು. ಅವರನ್ನು ನುಂಗಲು ಕಬಂಧನು ಪ್ರಯತ್ನಿಸಿ ವಿಫಲನಾಗುತ್ತಿದ್ದನು.

ರಾಮಲಕ್ಷ್ಮಣರು ತಮ್ಮ ವಿಶಿಷ್ಟ ಸಾಮರ್ಥ್ಯದಿಂದ, ಮಿಂಚಿನ ವೇಗದಲ್ಲಿ ಕಂಬಂಧನ ಬೃಹತ್ ತೋಳುಗಳನ್ನು ಕತ್ತರಿಸಿದರು! ಅವರು ಶ್ರೀರಾಮಲಕ್ಷ್ಮಣರೆಂದು ತಿಳಿದು ಸಂತಸಗೊಂಡ ಅವನು ಸ್ವರ್ಗದಲ್ಲಿ ತನ್ನ ಸೊಕ್ಕಿನ ನಡವಳಿಕೆಯ ಕಾರಣದಿಂದಾಗಿ ಸ್ಥೂಲಶಿರನೆಂಬ ಮಹರ್ಷಿಯಿಂದ ಈ ವಿಕಾರ ಆಕೃತಿಯು ತನಗೆ ದೊರಕಿತೆಂದು ಹೇಳಿದನು. ಆಋುಷಿಯನ್ನು ಕ್ಷಮಿಸಲು ಬೇಡಿದಾಗ ಶ್ರೀರಾಮನು ತನ್ನ ತೋಳನ್ನು ತುಂಡರಿಸಿ ಬೆಂಕಿಯಲ್ಲಿ ದಹಿಸಿದಾಗ ಮೊದಲಿನ ರೂಪ ಪಡೆಯುವುದಾಗಿ ಆ ಋಷಿಯು ಹೇಳಿದನೆಂದು ವಿವರಿಸಿದನು. ' ತನ್ನನ್ನು ದಹಿಸಿಬಿಡಿ' ಎಂದು ಶ್ರೀರಾಮನನ್ನು ಬೇಡಿಕೊಂಡನು. 'ಮೊದಲಿನ ರೂಪ ಪಡೆದ ನಂತರ ನಿಮಗೊಂದು ಉಪಕಾರ ಮಾಡುವೆನು' ಎಂದೂ ಹೇಳಿದನು. ಅವನ ದೇಹವು ದಹಿಸಲ್ಪಟ್ಟ ನಂತರ ಆ ಅಗ್ನಿಯಿಂದ ದಿವ್ಯರೂಪದ ತೇಜಸ್ವಿಯೊಬ್ಬ ಹೊರಬಂದನು. "ನೀವು ಪಂಪಾ ಸರೋವರದ ಬಳಿ ಹೋಗಿ. ಅಲ್ಲಿ ಋಷ್ಯಮುಖವೆಂಬ ಪರ್ವತವು ಇದೆ. ಅಲ್ಲಿ ಸತ್ಯಸಂಧ, ಬುದ್ಧಿವಂತನೂ, ವಿನೀತನೂ ಆದ ಸುಗ್ರೀವನೆಂಬ ವಾನರರಲ್ಲಿಯೇ ಉತ್ತಮನು ಇದ್ದಾನೆ. ಅವನ ಅಣ್ಣ ವಾಲಿಯು ಅವನನ್ನು ರಾಜ್ಯದಿಂದ ಹೊರಗಟ್ಟಿದ್ದಾನೆ. ಅವನ ಸಹಾಯದಿಂದ ಸೀತೆಯನ್ನು ಹುಡುಕುವುದು ಸಾಧ್ಯ" ಎಂದು ಹೇಳಿದನು.

ಮುಂದೆ ನಡೆದ ಶ್ರೀರಾಮ ಲಕ್ಷ್ಮಣರು ಶಬರಿಯ ಆತಿಥ್ಯ ಪಡೆದು ಮುನ್ನಡೆದಾಗ ಋಷ್ಯಮುಖ ಪರ್ವತ ಕಂಡಿತು.



ವನವಾಸದತ್ತ ಸೀತಾ, ರಾಮ ಮತ್ತು ಲಕ್ಷ್ಮಣರು




ಅಗಸ್ತ್ಯರೊಂದಿಗೆ ರಾಮಲಕ್ಷ್ಮಣರ ಭೇಟಿ



ರಾಕ್ಷಸರೊಂದಿಗೆ ರಾಮಲಕ್ಷ್ಮಣರ ಕಾದಾಟ


ಶ್ರೀರಾಮರು
ಸೀತಾದೇವಿ
ರಾಕ್ಷಸರು



ಕಬಂಧನ ಪೂರ್ವಜನ್ಮ

ಶ್ರೀರಾಮನಿಂದ ಕಬಂಧ ಸಂಹಾರ

ರೇಖಾ ರಾಮಾಯಣ

೩. ಕಿಷ್ಕಿಂದಾಕಾಂಡ

ಪಂಪಾ ಸರೋವರದ ತೀರದ ಸುಂದರ ಅರಣ್ಯವು ಶ್ರೀರಾಮನ ಮನವನ್ನು ಕಲಕಿತು; ಸೀತೆಯ ನೆನಪಾಯಿತು. ಲಕ್ಷ್ಮಣನು ಸಮಾಧಾನಿಸಿದನು. ಋಷ್ಯಮೂಕದಲ್ಲಿ ಕುಳಿತ್ತಿದ್ದ ವಾನರರಾಜ ಸುಗ್ರೀವನು ಶ್ರೀರಾಮ-ಲಕ್ಷ್ಮಣರನ್ನು ದೂರದಿಂದಲೇ ಕಂಡು ಅವರ ಬಗ್ಗೆ ವಿಚಾರಿಸಲು ಹನುಮಂತನನ್ನು ಕಳುಹಿಸಿ ನಿಜಾಂಶವನ್ನು ಅರಿತನು. ಶ್ರೀರಾಮನೊಂದಿಗೆ ಅಗ್ನಿಸಾಕ್ಷಿಯಾಗಿ ಸ್ನೇಹವನ್ನು ಬೆಳಸಿದನು. ಸುಗ್ರೀವನ ಹೆಂಡತಿಯು ವಾಲಿಯ ಬಳಿ ಇದ್ದಳು. ಹೀಗೆ ಅವನು ರಾಜ್ಯಭ್ರಷ್ಟನೂ, ಪತ್ನಿನಷ್ಟನೂ ಆಗಿದ್ದನು. ರಾವಣನು ಸೀತೆಯನ್ನು ಅಪಹರಿಸಿದ್ದನು. ಹೀಗಾಗಿ ಇಬ್ಬರೂ ಪರಸ್ಪರ ಸಹಾಯ ಮಾಡುವ ವಾಗ್ದಾನವನ್ನು ಅಗ್ನಿಸಾಕ್ಷಿಯಾಗಿ ವಿನಿಮಯ ಮಾಡಿಕೊಂಡರು. ಹಿಂದೆ ಸೀತಾಪಹರಣದ ಸಂದರ್ಭದಲ್ಲಿ ತನ್ನ ಆಭರಣಗಳನ್ನು ತಾನುಟ್ಟಿದ್ದ ಬಟ್ಟೆಯ ಸ್ವಲ್ಪ ಭಾಗ ಹರಿದು ಕಟ್ಟಿ ಸೀತೆಯು ಸುಗ್ರೀವ, ಹನುಮ ಮೊದಲಾದವರನ್ನು ನೋಡಿ ಕೆಳಕ್ಕೆ ಎಸೆದಿದ್ದಳು. ಆಕೆಯು ಸೀತೆಯೆಂದು ಸುಗ್ರೀವ, ಹನುಮರಿಗೆ ಗೊತ್ತಿರಲಿಲ್ಲ. ಆಗ ತೆಗೆದಿಟ್ಟಿದ್ದ ಆಭರಣಗಳ ಗಂಟನ್ನು ಸುಗ್ರೀವನು ಶ್ರೀರಾಮನ ಮುಂದಿರಿಸಿದನು. ಆಭರಣಗಳನ್ನು ಗುರುತಿಸಿದ ಶ್ರೀರಾಮನು ಸೀತೆಯನ್ನು ನೆನೆದು ಕುಸಿದನು. ಸುಗ್ರೀವನೇ ಶ್ರೀರಾಮನನ್ನು ಉಪಚರಿಸಿದನು. ಹಲವು ಬೆಳವಣಿಗೆಗಳ ನಂತರ ಸುಗ್ರೀವವಾಲಿಯರ ಭೀಕರ ಹೋರಾಟದಲ್ಲಿ ಶ್ರೀರಾಮನು ವಾಲಿಯನ್ನು ವಧಿಸಿದನು. ಸುಗ್ರೀವನಿಗೆ ಪಟ್ಟಾಭಿಷೇಕವು ಆಯಿತು. ವಾಲಿಯ ಮಗ ಅಂಗದನು ಯುವರಾಜನಾದನು. ಮಳೆಗಾಲವು ಮರೆಯಾಯಿತು. ಎಚ್ಚರಗೊಂಡ ಸುಗ್ರೀವನು ರಾಮಲಕ್ಷ್ಮಣರನ್ನು ಸೇರಿ ಸೀತಾನ್ವೇಷಣೆಗೆ ತೊಡಗಿದನು. ಸಮಸ್ತ ಭೂಮಂಡಲದ ಕಪಿಸೇನೆ, ಅಲ್ಲದೆ ಕರಡಿಗಳೂ ಬಂದಿದ್ದವು.

ಸುಗ್ರೀವನು ವಾನರ ನಾಯಕರ ಕಪಿಸೇನೆಯನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿದನು. ಅವರೆಲ್ಲರೂ ಅಸಾಮಾನ್ಯ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವರೇ ಆಗಿದ್ದರು. ವಿನತನೆಂಬ ಸೇನಾಪತಿಯನ್ನು ಒಂದು ಗುಂಪಿನೊಡನೆ ಪೂರ್ವಕ್ಕೆ, ಶತಬಲಿಯನ್ನು ಮತ್ತೊಂದು ಗುಂಪಿನೊಡನೆ ಉತ್ತರಕ್ಕೆ ಸುಗ್ರೀವನು ಕಳುಹಿಸಿದನು. ಸುಷೇಣನ ಗುಂಪು ಪಶ್ಚಿಮಕ್ಕೆ ಪಯಣಿಸಿತು. ದಕ್ಷಿಣ ದಿಕ್ಕಿಗೆ ಮಹಾಪರಾಕ್ರಮಿ ಅಂಗದನ ಸೇನಾಪತ್ಯದಲ್ಲಿ ಅಗ್ನಿಪುತ್ರ ನೀಲ, ಬ್ರಹ್ಮಪುತ್ರ, ಜಾಂಬವಂತ, ವಾಯುಪುತ್ರ ಹನುಮಂತ, ಸುಹೋತ್ರ, ಶರಾರಿ, ಶರಗುಲ್ಮ, ಗಜ, ಗವಯ, ಗವಾಕ್ಷ, ಋಷಭ, ಮೈಂದ, ದ್ವಿವಿದ, ವಿಜಯ, ಗಂಧ ಮಾದನ ಮೊದಲದವರು ಹೊರಟುನಿಂತರು. ಈ ಎಲ್ಲರ ಉದ್ದೇಶವು ಒಂದೇ. ಅದು ಸೀತೆಯ ಅನ್ವೇಷಣೆಯೇ ಆಗಿತ್ತು!

ದಕ್ಷಿಣ ದಿಕ್ಕಿಗೆ ಹೊರಟ ಗುಂಪಿನಲ್ಲಿದ್ದ ಹನುಮಂತನೇ ಕಾರ್ಯ ಸಾಧಿಸುವನೆಂಬ ನಂಬಿಕೆಯು ಸುಗ್ರೀವನಿಗಿದ್ದಿತು. ಉದ್ದೇಶಿಸಿದ ಯಾವುದೇ ಕೆಲಸವನ್ನು ಪೂರ್ಣಗೊಳಿಸುವ ವಿಶಿಷ್ಟ ಮನಸ್ಥಿತಿಯವನು ಹನುಮ. ಶ್ರೀರಾಮನೂ ಇದನ್ನು ಮನಗಂಡನು. ಕಾರ್ಯೋನ್ಮುಖನಾಗಿ ನಿಂತಿದ್ದ ಹನುಮಂತನನ್ನು ಕಂಡು ಸಂತಸಗೊಂಡನು. ಹನುಮಂತನು ಶ್ರೀರಾಮನ ಮುಂದೆ ಸರ್ವಸಮರ್ಪಿತ ದಾಸನಂತೆ ಕೈ ಜೋಡಿಸಿ ನಿಂತನು. ಶ್ರೀರಾಮನು ತನ್ನ ಬೆರಳಿನಿಂದ ಮುದ್ರೆಯುಂಗುರವನ್ನು ತೆಗೆದುಕೊಟ್ಟನು. ಸೀತೆಯ ಬಗ್ಗೆ ಹಲವು ಗುರುತು, ವಿಚಾರಗಳನ್ನು ಹೇಳಿದನು. 'ಈ ಮುದ್ರೆಯುಂಗುರದಿಂದ ಸೀತೆಯು ನೀನು ಯಾರೆಂದು ತಿಳಿಯುವಳು; ನನ್ನವನೆಂದು ನಿನ್ನೊಂದಿಗೆ ಭಯವಿಲ್ಲದೆ ಮಾತನಾಡುವಳು" ಎಂದನು.

ಆನಂತರ ಒಂದು ತಿಂಗಳ ಗಡುವು ನೀಡಿ ಈ ಎಲ್ಲ ಗುಂಪುಗಳಿಗೆ ವಿವಿಧ ದಿಕ್ಕುಗಳಿಗೆ ಹೊರಡಲು ಸುಗ್ರೀವನು ತಿಳಿಸಿದನು. ಅವಿಶ್ರಾಂತ ಅನ್ವೇಷಣೆಯಲ್ಲಿ ವಾನರರು ಬೆಟ್ಟ ಗುಡ್ಡ ಪರ್ವತಗಳಲ್ಲಿ ಸಂಚರಿಸಿದರು. ನದಿಗಳನ್ನು ದಾಟಿದರು; ಪರಿಶ್ರಮಪಟ್ಟರು; ಹುಡುಕಾಡಿದರು. ಸೀತೆಯ ಕುರುಹು ಸಿಗಲಿಲ್ಲ. ಪೂರ್ವ, ಪಶ್ಚಿಮ, ಉತ್ತರ ದಿಕ್ಕುಗಳ ವಾನರ ವೀರರು ನಿರಾಶರಾಗಿ ಒಂದು ತಿಂಗಳ ಗಡುವಿನ ಒಳಗೆ ಹಿಂತಿರುಗಿ ಬಂದರು. ತಮ್ಮ ವಿಫಲತೆಯ ವಿವರಗಳನ್ನು ವರದಿ ಮಾಡಿದರು. ಆದರೆ ದಕ್ಷಿಣ ದಿಕ್ಕಿನ ವೀರರು ಇನ್ನೂ ಬಂದಿರಲಿಲ್ಲ. ಹುಡುಕಾಟವನ್ನು ಮುಂದುವರೆಸಿದ್ದರು. ಅಂಗದನ ಹುರಿದುಂಬಿಸುವಿಕೆಯೂ ಇತರ ಕಪಿಗಳಿಗೆ ಚೇತೋಹಾರಿಯಾಗಿತ್ತು. ಈ ನಡುವೆ ಅವರೆಲ್ಲ ಅನಿರೀಕ್ಷಿತವಾಗಿ ಗುಹೆಯೊಂದನ್ನು ಹೊಕ್ಕು ಮಾಯಾಲೋಕವೊಂದರಲ್ಲಿ, ಸ್ವಯಂಪ್ರಭೆಯೆಂಬ ತಪಸ್ವಿನಿಯನ್ನು ಭೇಟಿಯಾಗಿ, ಆಕೆಯ ಆತಿಥ್ಯದಿಂದ ಉಲ್ಲಸಿತರಾದರು. ಆಕೆಯ ನೆರವಿನಿಂದ ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ದಕ್ಷಿಣ ಮಹಾಸಾಗರದ ದಂಡೆಯಲ್ಲಿದ್ದರು! ಎಲ್ಲರಿಗೂ ವಿಸ್ಮಯ. ಸ್ವಲ್ಪ ಸಮಯದಲ್ಲಿಯೇ ಜಟಾಯುವಿನ ಅಣ್ಣನಾದ ಸಂಪಾತಿಯೆಂಬ ದೊಡ್ಡ ಹದ್ದಿನ ನೆರವಿನಿಂದ ಅಂಗದ, ಹನುಮಂತರು ರಾವಣನು ಸೀತೆಯನ್ನು ಹೊತ್ತು ಒಯ್ದವನೆಂದು ತಿಳಿದರು. ನೂರಾರು ಯೋಜನಗಳ ದೂರದ, ಸಮುದ್ರದಾಚೆಯ ಲಂಕಾನಗರದಲ್ಲಿ ಸೀತೆಯು ರಾವಣನ ಸೆರೆಯಲ್ಲಿ ದುಃಖದಿಂದಿದ್ದಾಳೆ ಎಂದು ಸಂಪಾತಿಯು ಹೇಳಿತು. ವಾನರರಿಗೆ ಸೀತೆಯ ಸುದ್ದಿ ತಿಳಿದು ಕುಣಿದು ಕುಪ್ಪಳಿಸುವಂತಾಯಿತು.

ಸಮುದ್ರವನ್ನು ಹಾರಿಯೇ ಲಂಕೆಯನ್ನು ಸೇರಬೇಕಾಗಿದ್ದಿತು. ಹಾಗಾಗಿ ವಾನರರಿಗೆ ಚಿಂತೆಯುಂಟಾಯಿತು. ಅಷ್ಟು ದೂರ ಹಾರುವವರು ಯಾರು? ಚಿಂತನ ಮಂಥನಗಳು ನಡೆದವು.



ಋಷ್ಯ ಮೂಕಪರ್ವತದಲ್ಲಿ ರಾಮಲಕ್ಷ್ಮಣರ ಆಗಮನವನ್ನು ಗಮನಿಸುತ್ತಿರುವ ಹನುಮಂತ ಸುಗ್ರೀವರು



ಋಷ್ಯಮೂಕಪರ್ವತದಲ್ಲಿ ಸೇತುಬಂಧನದ ಬಗ್ಗೆ ಚರ್ಚೆ



ಋಷ್ಯ ಮೂಕಪರ್ವತದಲ್ಲಿ ರಾಮಲಕ್ಷ್ಮಣರು ಹನುಮಂತ ಸುಗ್ರೀವಾದಿಗಳೊಂದಿಗೆ



ಋಷ್ಯ ಮೂಕಪರ್ವತದಲ್ಲಿ ಶ್ರೀರಾಮನು ಹನುಮಂತನಿಗೆ ಉಂಗುರವನ್ನು ಕೊಡುತ್ತಿರುವಿಕೆ

೪. ಆಂಜನೇಯ

ತ್ರಯೋದಾಕ್ಷರ ಮಂತ್ರದಲ್ಲಿ ಹನುಮಂತನ ಸ್ವರೂಪವನ್ನು "ಸ್ಪಟಿಕ ಶಿಲೆಯಂತೆ ಶುಭ್ರವಾಗಿರುವ, ಚಿನ್ನದಂತೆ ಹೊಳೆಯುವ, ಎರಡು ಕೈಗಳಿಂದ ಅಂಜಲಿ ಬದ್ಧನಾಗಿರುವ ಎರಡು ಕಿವಿಗಳಲ್ಲಿ ಕುಂಡಲವನ್ನು ಧರಿಸಿರುವುದರಿಂದ ದಮಣೀಯವಾಗಿ ಕಂಗೊಳಿಸುವ ಮುಖಕಮಲವುಳ್ಳ ಹನುಮಂತನನ್ನು ನಾನು ಭಜಿಸುತ್ತೇನೆ." ಎಂದಿದೆ. ಚಿನ್ನದ ಬಣ್ಣದಲ್ಲಿ ಹನುಮಂತನನ್ನು ಚಿತ್ರಿಸಬೇಕೆಂದು ಮುಮ್ಮಡಿಯವರ 'ವಿಷ್ಣುನಿಧಿ'ಯಲ್ಲಿ ಹೇಳಲಾಗಿದೆ. ವಿಷ್ಣುದೇವಾಲಯಗಳಲ್ಲಿ, ಅದರಲ್ಲಿಯೂ ದಕ್ಷಿಣ ಭಾರತದ ದೇಗುಲಗಳಲ್ಲಿ ಎಲ್ಲರ ಕಣ್ಣಿಗೂ ಬೀಳುವಂತಿರುವ ದೇವತೆಗಳಲ್ಲಿ ಹನುಮಂತನ ಶಿಲ್ಪವೂ ಒಂದು. ಬಹುತೇಕ ಬೃಹದಾಕಾರಗಳಲ್ಲಿ ಉಬ್ಬು ಶಿಲ್ಪಗಳಲ್ಲಿ ಹನುಮಂತನ ರೂಪದ ವೈಭವೀಕರಣ ಗಮನಿಸ ಬಹುದು. ಕೋಲಾರ ಜಿಲ್ಲೆಯ ಮುಳುಬಾಗಲು ಹಾಗೂ ಚೆನ್ನಕೇಶವ ಆಚಾರ್ಯರ ದೇವನ ಹಳ್ಳಿಯ ಪಕ್ಕದಲ್ಲಿಯೇ ಇರುವ ಹೊಸಕೋಟೆ ತಾಲ್ಲೂಕಿನ ವಾಗಟ ಅಗ್ರಹಾರದಲ್ಲಿಯೂ ಇಂತಹ ವೈಭವದ ಹನುಮಂತನ ಉಬ್ಬು ಶಿಲ್ಪವನ್ನು ೨೦೧೬ರಲ್ಲಿಯೂ ಗಮನಿಸಬಹುದಾಗಿತ್ತು. ಆಂಜನೇಯನನ್ನು ಹನುಮಂತ, ವಾಯುಪುತ್ರನೆಂದೂ ಕರೆಯುವುದುಂಟು. ರಾಮಾಯಣದಲ್ಲಿ ಅವನನ್ನು ತುಂಬ ಸಭ್ಯ, ಸುಸಂಸ್ಕೃತ ಮತ್ತು ಎಲ್ಲವನ್ನೂ ಅರಿತ ಜ್ಞಾನಿಯೆಂದೇ ವರ್ಣಿಸಲಾಗಿದೆ. ಅವನೆಷ್ಟು ವಿವೇಕಿಯೋ ಅಷ್ಟೇ ಬಲಶಾಲಿ, ಹಾಗೆಯೇ ಶ್ರೀರಾಮನ ಮಹಾಭಕ್ತ; ಅಪರೂಪದ ಗುಣಗಳ ಸಮ್ಮಿಳನವೇ ಅವನು. ಅಂದರೆ ರಾಮಭಕ್ತನಾಗಿ, ರಾಮನ ದಾಸನುದಾಸನಾಗಿ ಹನುಮಂತನನ್ನು ಗುರುತಿಸಲಾಗಿದೆ. ಹೀಗಾಗಿ ರಾಮನ ಪ್ರತಿನಿಧಿಯಾಗಿಯೂ ತನ್ನ ಪ್ರಭಾವದಿಂದಲೂ ಪೂಜೆಯನ್ನು ಸ್ವೀಕರಿಸುತ್ತಿದ್ದಾನೆ. ಭಕ್ತಾಂಜನೇಯನದು ತ್ರಿಭಂಗ ಅಥವಾ ಸಮಭಂಗದ ಅಂಜಲೀ ಬದ್ಧ ರೂಪವಾದರೆ, ವೀರಾಂಜನೇಯನದು ಯಾನಕಭಂಗಿಯಲ್ಲಿದ್ದು ವಿವಿಧ ಆಯುಧಗಳನ್ನು ಅಲಂಕರಿಸಿಕೊಂಡಿರುವ ರೂಪವಾಗಿದೆ. ಪದ್ಮಾಸನದಲ್ಲಿ ಯೋಗ ಮುದ್ರೆಯ ಭಂಗಿಯಲ್ಲಿದ್ದರೆ ಯೋಗಾಂಜನೇಯ, ಶ್ರೀರಾಮ ಸೀತೆ, ಲಕ್ಷಣರೊಂದಿಗಿದ್ದರೆ ರಾಮಾಂಜನೇಯ. ಪಂಚಮುಖ ಮತ್ತು ಹತ್ತು ಕೈಗಳಲ್ಲಿ ವಿವಿಧ ಆಯುಧಗಳನ್ನು ಧರಿಸಿದ್ದರೆ ಪಂಚಮುಖೀ ಆಂಜನೇಯ ಎಂದೂ ಕರೆಯಲಾಗುತ್ತಿದೆ.

ಪ್ರಸ್ತುತ ರೇಖಾಚಿತ್ರ ಸಂಗ್ರಹದಲ್ಲಿ ಚೆನ್ನಕೇಶವ ಆಚಾರ್ಯರ ಯೋಗಾಂಜನೇಯ, ಭಕ್ತಾಂಜನೇಯ, ಅಭಯಾಂಜನೇಯ, ಪಂಚಮುಖಾಂಜನೇಯ, ವೀರಾಂಜನೇಯ ರೇಖಾಚಿತ್ರಗಳಿವೆ. ದೇವನಹಳ್ಳಿ, ಹೊಸಕೋಟೆ, ಕೋಲಾರ ಜಿಲ್ಲೆಗಳ ಹಲವಾರು ದೇವಾಲಯಗಳಲ್ಲಿ ವೀರಾಂಜನೇಯನ ಉಬ್ಬಶಿಲ್ಪಗಳೇ ದೊಡ್ಡರೀತಿಯಲ್ಲಿ ಪ್ರತಿಷ್ಠಾಪನೆಗೊಂಡಿವೆ.

ಪಂಚಮುಖ ಆಂಜನೇಯ

ಸುದರ್ಶನ ಸಂಹಿತೆಯಲ್ಲಿ ಈ ಹನುಮಂತನಿಗೆ ಪಂಚಮುಖಗಳು. ಭಯಂಕರ ರೂಪವು ಹದಿನೈದು ಕಣ್ಣುಗಳಿಂದ ಕೂಡಿದೆ. ಕೋಟಿಸೂರ್ಯರಂತೆ ಹೊಳೆಯುವ ಕಪಿ ಮುಖಿ ಇವನು. ಇವನ ಮುಖವು ಕೋರೆದಾಡೆಗಳಿಂದ ಭೀಕರವಾಗಿದೆ. ವಕ್ರವಾದ ಹುಬ್ಬಗಳಿಂದ ಇವನ ಬಲಗಡೆಯ ಒಂದು ಮುಖವು ನರಸಿಂಹನ ಮುಖದಂತೆ ಇದ್ದು ಅಚ್ಚರಿಯನ್ನುಂಟು ಮಾಡುತ್ತದೆ. ಇವನ ಶರೀರವು ಅತಿ ಘೋರವಾದ ತೇಜಸ್ಸಿನಿಂದ ಕೂಡಿದೆ. ಇವನು

ಭಯಂಕರನೂ, ಭಯನಾಶಕನ್ನೂ ಆಗಿದ್ದಾನೆ ಪಶ್ಚಿಮದಿಕ್ಕಿನ ಮುಖವು ಗರುಡನ ಮುಖದಂತಿದೆ ಈ ಮುಖದಲ್ಲಿನ ಕೊಕ್ಕು ವಜ್ರ ಸಮಾನವಾದುದು. ಪ್ರಖರ ಹೊಳಪಿನ ಮುಖವು ಇದು. ಈ ಪಶ್ಚಿಮ ಮುಖವು ಭಯಂಕರವಾಗಿದ್ದು ಪಾತಾಳ ಲೋಕಕ್ಕೆ ಹೋಗುವ ಸಿದ್ಧಿಯನ್ನು ಕೊಡುವಂತಹುದು. ಅಷ್ಟೇ ಅಲ್ಲದೆ ವಿಷಪ್ರಭಾವ, ಭೂತ, ಪ್ರೇತ, ಪಿಶಾಚಿಗಳ ಪೀಡೆಗಳನ್ನು ಇಲ್ಲದಂತೆ ಮಾಡುವಂತಹುದು. ಇವನ ಉತ್ತರ ಮುಖವು ಹಂದಿಯ ಮುಖವಾಗಿದೆ. ಕಪ್ಪು ಬಣ್ಣದ್ದಾಗಿದ್ದು ಆ ಮುಖವು ಕಾಂತಿಯುತವಾಗಿದೆ. ಜತೆಗೆ ಉರಿಯುತ್ತಿರುವ ಅಗ್ನಿಜ್ವಾಲೆಯಂತೆ ಪ್ರಕಾಶಿಸುತ್ತಿದೆ ಈ ಮುಖವು ಸಕಲಭೂತ ಪೀಡೆಗಳನ್ನು ತಣ್ಣಗೆ ಮಾಡುತ್ತದೆ. ಅಧಿಕ ತಾಪದಿಂದುಂಟಾಗುವ ಜ್ವರ ರೋಗವನ್ನು ಹೋಗಲಾಡಿಸುತ್ತದೆ. ಮೇಲಿನದು ಕುದುರೆಯ ಮುಖ. ಇದು ಭೀಕರವಾಗಿದೆ.[೧] ರಾಕ್ಷಸರ ವಿನಾಶದ ಉತ್ಕೃಷ್ಟ ರೂಪದ ಮುಖ ಇದು.

ಖಡ್ಗ, ತ್ರಿಶೂಲ, ತುದಿಯಲ್ಲಿ ತಲೆಬುರುಡೆ ಹೊಂದಿದ ಗದೆ, ಹಗ್ಗ, ಅಂಕುಶ, ಪರ್ವತ, ಮರ, ಗೋಮುದ್ರಿಕಾ, ಮುಂಡ ಮತ್ತು ಹತ್ತನೆಯದಾದ ದೇವತೆಗಳಿಂದ ನಮಸ್ಕರಿಸಲ್ಪಟ್ಟ ಒಂದು ಆಯುಧ, ಹೀಗೆ ಎಲ್ಲ ಆಯುಧಗಳನ್ನು ತನ್ನ ಬೃಹತ್ ಕೈಗಳಲ್ಲಿ ಹಿಡಿದಿರುವ ಪಂಚಮುಖದ ಆಂಜನೇಯನು ದಿವ್ಯವಾದ ಮಾಲೆಗಳನ್ನು ಉತ್ತಮ ವಸ್ತ್ರಗಳನ್ನು ತೊಟ್ಟಿದ್ದಾನೆ. ಗಂಧವನ್ನು ಮೈಗೆಲ್ಲಾ ಲೇಪಿಸಿಕೊಂಡಿದ್ದಾನೆ. ಪ್ರೇತಗಳೇ ಇವನ ಆಸನ. ಅಂತಹ ಆಸನದ ಮೇಲೆ ಕುಳಿತ್ತಿದ್ದಾನೆ. ಸಕಲ ಆಭರಣಗಳಿಂದ ಭೂಷಿತನಾಗಿದ್ದಾನೆ. ಸಕಲ ಆಚ್ಚರಿಗಳಿಂದ ತುಂಬಿರುವ, ಇಂತಹ ಹನುಮಂತನನ್ನು ಸಿದ್ಧಿಗಾಗಿ ಧ್ಯಾನಿಸಬೇಕು ಎಂದು ವಿವರಿಸಲಾಗಿದೆ.

ಯೋಗಾಂಜನೆಯ

ಭಕ್ತಾಂಜನೇಯ

ಅಭಯಾಂಜನೇಯ

ಪಂಚಮುಖಾಂಜನೇಯ


ವೀರಾಂಜನೇಯ.

ಟಿಪ್ಪಣಿ

೧. ಪುರಾಣಗಳಲ್ಲಿ ಕಾಣಿಸಿಕೊಂಡಿರುವ ಹಯಗ್ರೀವರೂಪವು ಕುದುರೆಯ ಮುಖ ಹೊಂದಿದ ದೇವರೂಪವೇ ಆಗಿದೆ. ಜೀವಶಕ್ತಿಯ ಸಾಮರ್ಥ್ಯಗಳಿಂದ ಕೂಡಿದ ಅಗ್ನಿಯ ಒಂದು ರೂಪ ದಧಿಕ್ರಾವಣ.* ಚೈತ್ಯದ ಉನ್ನತ ಸ್ತರಗಳೆಡೆಗೆ ಧಾವಿಸುವ ಕುದುರೆಯ ರೂಪದಲ್ಲಿ ಇದನ್ನು ಸಂಕೇತಿಸಲಾಗಿದೆ.

* **ದಧಿಕ್ರಾವ್ಣೋ ಅಕಾರಿಷಂ**
ಜಿಷ್ಣೋಃ ಅಶ್ವಸ್ಯವಾಜಿನಃ
ಸುರಭಿ ನೋ ಮುಖಾ ಕರತ್
ಪ್ರಣ ಆಯೂಂಷಿ ತಾರಿಷತ್ ॥

–ಋಗ್ವೇದ (೪.೩೯.೬)



ಯೋಗಾಂಜನೇಯ, ಭಕ್ತಾಂಜನೇಯ, ಅಭಯಾಂಜನೇಯ



ಪಂಚಮುಖಾಂಜನೇಯ



ಪಂಚಮುಖಾಂಜನೇಯ



ವೀರಾಂಜನೇಯ




೫. ಸುಂದರಕಾಂಡ

ಜಾಂಬವಂತನಿಂದ ಪ್ರೇರಿತಗೊಂಡ ಹನುಮಂತನು ಆಕಾಶಮಾರ್ಗವಾಗಿ ಹಾರುವಿಕೆಗೆ ಸಿದ್ಧನಾದನು; ಸಮುದ್ರವೂ ಸಹಕರಿಸಿತು. ನಡುವೆ ಮೈನಾಕ ಪರ್ವತವನ್ನು ಎದುರಿಸಿದ ನಂತರ ನಾಗಮಾತೆ ಸುರಸೆಯ ಭೀಕರ ರೂಪವನ್ನು ನೋಡಿದನು. ಆಕೆಯ ಒಳ ಹೊಕ್ಕು ಬಂದನು; ಸೀತಾನ್ವೇಷಣೆಗೆ ಮುನ್ನಡೆದನು. ಮುಂದೆ ಭೂತಾಕಾರದ ವಿಕಾರಿ ಸಿಂಹಿಕೆಯನ್ನು ಕಂಡನು. ಅವಳ ಆಹ್ವಾನವನ್ನು ಸ್ವೀಕರಿಸಿ ಅವಳ ಬಾಯನ್ನು ಹೊಕ್ಕು, ಚೂಪಾದ ಉಗುರುಗಳಿಂದ ಅವಳ ಎದೆಯನ್ನು ಸೀಳಿ ಹೊರಬಂದನು; ಅವಳು ಸತ್ತಳು. ಹೀಗೆ ಅವನು ಎಲ್ಲ ವಿಘ್ನಗಳನ್ನು ಗೆದ್ದನು. ಹಾರಿಹಾರಿ ಸ್ವರ್ಣಲಂಕೆಯನ್ನು ಕಂಡನು! ಅಲ್ಲಿಯ ಲಂಬ ಎಂಬ ಶಿಖರದ ಮೇಲಿನಿಂದ ಆ ನಗರವನ್ನು ನಿಟ್ಟಿಸಿದನು. ರಾಕ್ಷಸರು ಕಂಡಾರೆಂದು ತನ್ನ ದೇಹವನ್ನು ಕುಗ್ಗಿಸಿಕೊಂಡನು. ಬಂಗಾರದ ಲಂಕೆಯನ್ನು ಅದರ ವೈಭವವನ್ನು ಕಂಡು ವಿಸ್ಮಯಗೊಂಡನು. ಬೆಳದಿಂಗಳ ರಾತ್ರಿಯಲ್ಲಿ ಲಂಕೆಯನ್ನು ಪ್ರವೇಶಿಸಲು ಯತ್ನಿಸಿ ಲಂಕಿಣಿಯೊಂದಿಗಿನ ಮುಖಾಮುಖಿಯಲ್ಲಿ ವಿಜಯಿಯಾದನು. ಲಂಕೆ ನಗರದಲ್ಲಿ ಹುಡುಕಾಡಿ ಅಶೋಕವನದಲ್ಲಿ ಸೀತೆಯನ್ನು ಕಂಡನು. ರಾವಣನು ಸೀತೆಯನ್ನು ನೋಡಲು ಬಂದು ಆಕೆಗೆ ಹಲವು ಆಮಿಷಗಳನ್ನು ಒಡ್ಡಿದರೂ ಸೀತೆಯು ನಿರ್ಲಕ್ಷಿಸಿದ್ದನ್ನು ನೋಡಿದನು. ಹುಲ್ಲುಕಡ್ಡಿಯೊಂದಿಗೆ ಸೀತೆಯು ರಾವಣನನ್ನು ಉದ್ದೇಶಿಸಿ ಶ್ರೀರಾಮನ ಅಸಾಮಾನ್ಯತೆಯನ್ನು ಹೊಗಳಿದ್ದನ್ನೂ ಹನುಮಂತನು ಕೇಳಿದನು. ಆಕೆಯ ದಿಟ್ಟತೆಯನ್ನು ಕಂಡನು. ಧಾನ್ಯ ಮಾಲಿನಿ ಎಂಬ ಪತ್ನಿಯೊಬ್ಬಳ ಸಮಾಧಾನಿತ ಮಾತು ಕೇಳಿದ ನಂತರವೂ ರಾವಣನು ಆಕೆಗೆ ಚಿತ್ರಹಿಂಸೆ ಕೊಡಲು ಕಾವಲು ರಕ್ಕಸಿಯರಿಗೆ ಹೇಳಿ ಅರಮನೆಗೆ ಹೊರಟನು. ರಾಕ್ಷಸಿಯರ ಬೆದರಿಕೆಗೆ ಬಗ್ಗದ ಸೀತೆಗೆ ಹನುಮಂತನು ರಾಕ್ಷಸಿಯರು ನಿದ್ರೆಗೆ ಜಾರಿದ ಸಂದರ್ಭದಲ್ಲಿಯೂ ಎಚ್ಚರವಾಗಿಯೇ ಇದ್ದುದರಿಂದ ವಾನರ ರೂಪದಲ್ಲಿಯೇ ಉಳಿದು ಮನುಷ್ಯ ಭಾಷೆಯಲ್ಲಿ ಸೀತೆಯೊಂದಿಗೆ ಸಂಭಾಷಿಸಿ 'ಶ್ರೀರಾಮನ ಕಥೆ'ಯನ್ನು ಹೇಳಲಾರಂಭಿಸಿದನು.

ಸೀತೆಗೆ ಹನುಮಂತನ ಕುರಿತು ಕೌತುಕ; ಅನುಮಾನ. ಮಾತಿನ ನಡುವೆ ಶ್ರೀರಾಮನ ಕುರಿತ ಇಂದ್ರನ ಮಗ ಜಯಂತನಿಗೆ ಸಂಬಂಧಿತ ಕಾಕಾಸುರನ ಕಥೆ ಕೇಳಿ ಮತ್ತು ಉಂಗುರ ಕಂಡು ಅವನನ್ನು ನಂಬಿದಳು; ಎಲ್ಲವನ್ನೂ ತಿಳಿದು ಸಂತೋಷದ ನಡುವೆಯೂ ಆತಂಕಗೊಂಡಳು. ನಂತರ ಸೀತೆಯು ಎಲ್ಲವನ್ನು ತಿಳಿದ ನಂತರ ತನ್ನ ಚೂಡಾಮಣಿಯನ್ನು ರಾಮನಿಗಾಗಿ ತೆಗೆದುಕೊಟ್ಟಳು. ಹನುಮಂತನು ನಂತರ ರಾಮನಲ್ಲಿಗೆ ಹಿಂತಿರುಗಲು ಸಿದ್ಧನಾದರೂ ತನ್ನ ಶಕ್ತಿಯನ್ನು ರಾವಣನಿಗೆ ತೋರಲು ಅಶೋಕ ವನವನ್ನು ಹಾಳುಮಾಡಿದನು. ರಾವಣನಿಗೆ ಸುದ್ದಿ ತಲುಪಿತು. ಹನುಮಂತನನ್ನು ಎದುರಿಸಲು ಬಂದ ಹಲವು ಸೇನಾಪತಿಗಳು, ರಾವಣನ ಮಗನಾದ ಅಕ್ಷಯ ಕುಮಾರ ಮೊದಲಾದವರು ಅವನಿಗೆ ಬಲಿಯಾದರು. ಕುಪಿತಗೊಂಡ ರಾವಣನು ಬ್ರಹ್ಮಾಸ್ತ್ರ ಹೊಂದಿರುವ ಮೇಘರಾಜನನ್ನು ಹನುಮಂತನ ವಿರುದ್ಧ ಕಳುಹಿಸಿದನು. ಬ್ರಹ್ಮಾಸ್ತ್ರದಲ್ಲಿ ಬಂಧಿತನಾದ ಹನುಮಂತನನ್ನು

ರಾವಣನ ಸಭೆಗೆ ಕರೆತರಲಾಯಿತು. ರಾಮದೂತ ಹನುಮನಿಂದ ರಾವಣನಿಗೆ ಶ್ರೀರಾಮ ಕಥೆಯ ಬೋಧೆಯು ಆಯಿತು. ವಿಭೀಷಣನ ಸಂಧಾನವೂ ನಡೆಯಿತು. ಹಾಗಾಗಿ 'ಧೂತನನ್ನು ವಧಿಸಬಾರದೆಂಬ ನಿಯಮ' ರಾವಣನಿಂದ ಪಾಲಿಸಲ್ಪಟ್ಟು ಅವನ ಬಾಲಕ್ಕೆ ಬೆಂಕಿ ಹಚ್ಚಲಾಯಿತು. ಹನುಮಂತನು ತನ್ನ ವಿರಾಟ್ ರೂಪದಿಂದ ತನ್ನ ಬಾಲದ ಬೆಂಕಿಯಿಂದ ಬಂಗಾರದ ಲಂಕೆಯನ್ನು ಧಗಧಗನೆ ಉರಿಸಿದನು. ಮತ್ತೆ ಸೀತೆಯನ್ನು ಕಂಡು ಮಾರುತಿಯು ರಾಮ-ಲಕ್ಷ್ಮಣ-ಸುಗ್ರೀವರತ್ತ ಹೊರಟನು; ಅವರನ್ನು ಸೇರಿದನು. 'ಸೀತೆಯನ್ನು ನೋಡಿಬಂದೆ' ಎಂದನು. ಶ್ರೀರಾಮ-ಲಕ್ಷ್ಮಣ ಸುಗ್ರೀವರೆಲ್ಲರಿಗೂ ಆನಂದವಾಯಿತು. ನಂತರ ಹನುಮಂತನು ಸಾಗರವನ್ನು ಹಾರಿದ ದಿನದಿಂದ ಆರಂಭಿಸಿ ಲಂಕೆಯಿಂದ ಹಿಂತಿರುಗಿ ಬಂದ ದಿನದವರೆಗಿನ ವಿವರಗಳನ್ನು ವೈದೇಹಿಯ ವೃತ್ತಾಂತವನ್ನು ಶ್ರೀರಾಮನಿಗೆ ವಿವರಿಸಿದನು; ಬಹು ಜಾಗ್ರತೆಯಿಂದ ಸಂರಕ್ಷಿಸಿ ಇಟ್ಟುಕೊಂಡಿದ್ದ, ಸೀತೆಯು ತನ್ನ ಗುರುತಿಗಾಗಿ ಕೊಟ್ಟಿದ್ದ ಚೂಡಾಮಣಿಯನ್ನು ಶ್ರೀರಾಮನಿಗೆ ಕೊಟ್ಟನು! ಶ್ರೀರಾಮನ ಆತಂಕದ ಮನಸ್ಥಿತಿಯನ್ನು ಅರಿತು ಮಾತನಾಡಿದ ಹನುಮಂತನ ಮನೋಭಾವದಿಂದ ಶ್ರೀರಾಮನು ಶಾಂತನಾದನು.






ರಾವಣನ ವಂಶಮೂಲ : ಪೌಲಸ್ತ್ಯ ಬ್ರಹ್ಮನ ನಾಲ್ವರು ಹೆಂಡತಿಯರೂ ಶಿವನನ್ನು ಕುರಿತು ತಪಸ್ಸಿಗೆ ಹೊರಟ ಸಂದರ್ಭ




ಶಿವನ ವರಪ್ರಸಾದಕ ವಿಭೀಷಣ ಮೂರ್ತಿ, ಶೂರ್ಪಣಖಿದೇವಿ ಮೊದಲಾದವರು




ಹಿರಣ್ಯಕಶಿಪು ಹಿರಣ್ಯಾಕ್ಷ



ಶ್ರೀ ಏಕಾದಶರುದ್ರಲಿಂಗೋದ್ಭವ ಶ್ರೀ ಪರಮೇಶ್ವರ ಮೂರ್ತಿ
ಪಾರ್ವತಿದೇವಿ : ಶಿವಪೂಜಾ ದುರಂಧರ ರಾವಣ ಬ್ರಹ್ಮನ ಪೂಜಾ ತಪಸ್ಸು


ಪೌಲಸ್ತ್ಯ ಬ್ರಹ್ಮನು
ತತುಭಿ
ಕುಂಭಕರ್ಣ
ತೈತಶಿದೇವಿ
ರಾವಣ
ಪಾತಾದೇವಿ
ವಿಭೀಷಣ
ಲೋಲಾಂಬಾ, ಶೂರ್ಪಣಖಿ


ಪೌಲಸ್ತ್ಯನ ನಾಲ್ವರು ಹೆಂಡತಿಯರಿಗೆ ಶಿವನ ಅನುಗ್ರಹದ ನಂತರ ತತುಭಿಗೆ
ಕುಂಭಕರ್ಣ, ತೈತಶಿದೇವಿಗೆ ರಾವಣ ಪಾತಾದೇವಿಗೆ ವಿಭೀಷಣ
ಲೋಲಾಂಬಾಗೆ ಶೂರ್ಪಣಖಿ ಹುಟ್ಟಿದರು




ರೇಖಾ ರಾಮಾಯಣ

ಯಮಧರ್ಮಮೂರ್ತಿ ಶ್ಯಾಮಲಾದೇವಿ, ರಾವಣ, ನಾರದ, ತುಂಬುರ
ಮೊದಲಾದವರು





ರೇಖಾ ರಾಮಾಯಣ



ರಾವಣ
ಆಂಜನೇಯ




ರೇಖಾ ರಾಮಾಯಣ



ರಾವಣ ಸಭೆ



ರೇಖಾ ರಾಮಾಯಣ


ಸೀತೆಗೆ ತನ್ನ ವಿಶ್ವರೂಪ
ತೋರಿಸುವಿಕೆ
ವೀರಹನುಮ
ಹನುಮದ್ವೈಭವ




ರೇಖಾ ರಾಮಾಯಣ






ರೇಖಾ ರಾಮಾಯಣ


ಅಯೋಧ್ಯೆ





೬. ಯುದ್ಧಕಾಂಡ

ಹನುಮಂತನ ಮಾತುಗಳಿಂದ ಸಂಪ್ರೀತನಾದ ಶ್ರೀರಾಮನು ಹನುಮಂತನನ್ನು ಆಲಂಗಿಸಿದನು; ಭರವಸೆಯ ಬೆಳಕು ಕಂಡಿತು. ಲಂಕೆಯ ಕಡೆಗೆ ದಂಡಯಾತ್ರೆಯು ಹಲವು ಪೂರ್ವಸಿದ್ಧತೆಗಳ ನಂತರ ಆರಂಭಗೊಂಡಿತು.

ಸಾಗರವೀರರ ಸಮಾಲೋಚನೆಗಳೂ, ಮುಂದಿನ ಕಾರ್ಯ ಯೋಜನೆಗಳೂ ಸವಿವರವಾಗಿ ನಡೆದವು. ಅತ್ತ ಲಂಕೆಯಲ್ಲಿಯೂ ಸಾಗರ ತೀರದಲ್ಲಿ ಶ್ರೀರಾಮನ ದಂಡು ಬೀಡುಬಿಟ್ಟಿರುವುದರ ವಿವರ ಪಡೆದು ರಾವಣನು ತನ್ನ ಮಂತ್ರಿಗಳೊಂದಿಗೆ ಸಮಾಲೋಚಿಸಿದನು. ಅವರ ಸಲಹೆಗಳೊಂದಿಗೆ ಕಾರ್ಯ ಯೋಜಿಸಲು ಸಿದ್ಧನಾದನು. ಬೆಂಬಲಿಗ ರಾಕ್ಷಸರ ಬುದ್ಧಿಶೂನ್ಯ ಬಡಾಯಿಯ ಪ್ರೋತ್ಸಾಹ ರಾವಣನಿಗೆ ಲಭಿಸಿತು. ಆದರೆ ವಿವೇಕವಂತ ವಿಭೀಷಣನು ಅವರನ್ನೆಲ್ಲಾ ಟೀಕಿಸಿದನು. ಶ್ರೀರಾಮನ ಘನತೆ, ಶಕ್ತಿ ಸಾಮರ್ಥ್ಯಗಳನ್ನು ಆ ಹಿಂದಿನ ಸಂದರ್ಭಗಳ ಉದಾಹರಣೆಗಳಿಂದ ಸಭೆಯ ಮುಂದೆ ಮಂಡಿಸಿ "ಸೀತೆಯನ್ನು ಶ್ರೀರಾಮನಿಗೆ ಒಪ್ಪಿಸುವುದು ಉತ್ತಮ; ಇಲ್ಲದಿದ್ದಲ್ಲಿ ಧರ್ಮ ಮಾರ್ಗ ಬಿಟ್ಟರೆ ನಮಗೆ ಜಯಲಭಿಸದು. ಧರ್ಮಮಾರ್ಗದಲ್ಲಿ ನಡೆದು ನಮ್ಮ ಬಂಧುಗಳೊಂದಿಗೆ ಕ್ಷೇಮದಿಂದ ಇರೋಣ," ಎಂದನು. ಮರುದಿನ ಅರಮನೆಯ ಏಕಾಂತದಲ್ಲಿಯೂ ರಾವಣನಿಗೆ ಬುದ್ಧಿಮಾತು ಹೇಳಿದನು; ಪರಸ್ತ್ರೀಯನ್ನು ಕಾಮಿಸುವುದು ಅಧರ್ಮ ಎಂದನು; ಲಂಕೆಯನ್ನು ಸರ್ವನಾಶದಿಂದ ತಪ್ಪಿಸು ಎಂದು ಕೇಳಿಕೊಂಡನು. ಆದರೆ ವಿನಾಶವಾಗಬೇಕಿದ್ದ ರಾವಣನು ತನ್ನ ಮನಸ್ಸನ್ನು ಯುದ್ಧಭೂಮಿಗೆ ಅರ್ಪಿಸಿದ್ದನು. ಅಧರ್ಮದ ಹಾದಿಯನ್ನು ಆಯ್ಕೆ ಮಾಡಿಕೊಂಡಿದ್ದನು. ತನ್ನಶಕ್ತಿ ಸಾಮರ್ಥ್ಯಗಳ ಬಗ್ಗೆ ವಿಭೀಷಣನಿಗೆ ನೆನಪು ಮಾಡಿ ಅವನನ್ನು ಕೆಟ್ಟದಾಗಿ ನಿಂದಿಸಿ ಕಳುಹಿಸಿದನು.

ಮತ್ತೊಂದು ಮಂತ್ರಾಲೋಚನಾ ಸಭೆಯಲ್ಲಿ ಕುಂಭಕರ್ಣನೂ ರಾವಣನ ಅನಾಹುತವನ್ನು ಪ್ರಶ್ನಿಸಿದರೂ ಅಣ್ಣನೆಂದು ಸಹಾಯ ಮಾಡಬೇಕಷ್ಟೇ ಎಂದು ಗೊಣಗಿದನು. ರಾವಣನು ಕೋಪಗೊಂಡನು. ಮಹಾಪಾರ್ಶ್ವನೆಂಬ ರಾಕ್ಷಸನು ಕುಂಭಕರ್ಣನನ್ನು ಕೆಟ್ಟದಾಗಿ ಟೀಕಿಸಿ ರಾವಣನ ದುರ್ಗುಣಗಳನ್ನು ಹೊಗಳಿದನು. ಉಳಿದ ಮಂತ್ರಿಗಳೂ ಅವನನ್ನೇ ಅನುಸರಿಸಿದರು. ಈ ವಿಕೃತ ನಡವಳಿಕೆಗಳನ್ನು ತಡೆದುಕೊಳ್ಳಲಾಗದೆ ವಿಭೀಷಣನು ಪುನಃ ಬಲವಾಗಿ ತನ ಹಿತವಾದವನ್ನು ರಾವಣನಿಗೆ ಹೇಳಿದನು. ಇಂದ್ರಜಿತುವು ತನ್ನ ಚಿಕ್ಕಪ್ಪನಾದ ವಿಭೀಷಣನನ್ನು ಹಂಗಿಸಿದನು. ಆದರೂ ಮತ್ತೆ ಮತ್ತೆ ವಿಭೀಷಣನು ಸೀತೆಯನ್ನು ಸಮುದ್ರದ ಆಚೆ ತೀರದಲ್ಲಿಬೀಡು ಬಿಟ್ಟಿರುವ ಶ್ರೀರಾಮನಿಗೆ ಒಪ್ಪಿಸುವುದು ಧರ್ಮ ಎಂದು ರಾವಣನಿಗೆ ಹೇಳಿದನು. ವಿಭೀಷಣನ ಒತ್ತಾಯದಿಂದ ಕ್ರೋಧಗೊಂಡ ರಾವಣನು ವಿಭೀಷಣನನ್ನು ಕೆಟ್ಟ ಪದಗಳಿಂದ ಅವಮಾನಿಸಿ ಮಂತ್ರಿಮಂಡಲ ಸಭೆಯಿಂದ ಹೊರಗೆ ಹೋಗಲು ಹೇಳಿದನು.

ಸಹನೆಗೆಟ್ಟ ವಿಭೀಷಣನು ಗದೆ ಹಿಡಿದು ಗಗನದಲ್ಲಿ ನಿಂತನು. ನಾಲ್ವರು ಇತರ ಮಂತ್ರಿಗಳೂ ಜತೆಯಾದರು. ವಿಭೀಷಣನು ರಾವಣನನ್ನು ಕುರಿತು "ನನ್ನನ್ನು ಕ್ಷಮಿಸು: ನಿನಗೆ ದೇವರು ಒಳ್ಳೆಯ ಬುದ್ಧಿಯನ್ನು ಕೊಡಲಿ" ಎಂದು ಹೇಳಿ ಲಂಕೆಯನ್ನು ತನ್ನ ಸಂಪತ್ತು, ಬಂಧು–ಬಳಗ ಎಲ್ಲವನ್ನೂ ತೊರೆದು. ಅಧಿಕಾರಬಿಟ್ಟು ಶ್ರೀರಾಮನ ಆಶ್ರಯ ಹುಡುಕಿ ಹೊರಟನು.

ಶ್ರೀರಾಮನ ಮುಂದೆ ನಿಂತು 'ರಾವಣನ ಅಧರ್ಮೀಯ ನಡವಳಿಕೆಗೆ ಬೇಸತ್ತು, ಎಲ್ಲವನ್ನೂ, ಎಲ್ಲರನ್ನೂ ಬಿಟ್ಟು ನಿನ್ನ ಆಶ್ರಯಕ್ಕೆ ಬಂದಿದ್ದೇನೆ' ಎಂದನು. ಶರಣಾಗತ ವ್ರತಧಾರಿ ಶ್ರೀರಾಮನು ಸುಗ್ರೀವ, ಹನುಮಂತ ಮತ್ತಿತರ ಎಲ್ಲರ ಅಭಿಪ್ರಾಯ ತಿಳಿದು 'ಶರಣಾಗಿ ಬಂದಿರುವ ವಿಭೀಷಣನನ್ನು ಸ್ವಾಗತಿಸಬೇಕು. ಜೀವ ಇರುವ ಯಾರೇ ಬಂದರೂ, ಶತೃವೇ ಬಂದು ಆಶ್ರಯ ಬೇಡಿದರೂ ಅವರನ್ನು ಕಾಪಾಡುವುದೇ ನನ್ನ ವ್ರತ." ಎಂದು ಹೇಳಿದನು. ಹಾಗೆಯೇ ವಿಭೀಷಣನಿಗೆ "ವಿಭೀಷಣ, ರಣರಂಗದಲ್ಲಿ ನಾನು ರಾವಣ ಮತ್ತು ಅವನ ಬೆಂಬಲಿಗರನ್ನು ನಾಶ ಮಾಡುವೆನು; ಈ ಭ್ರಷ್ಟತಾಣವನ್ನು ಧ್ವಂಸಗೊಳಿಸಿದ ನಂತರ ಮಾತ್ರ ಅಯೋಧ್ಯೆಯ ಪ್ರವೇಶ. ಆಗ ಲಂಕೆಯಲ್ಲಿ ನಿನ್ನ ಪಟ್ಟಾಭಿಷೇಕ ಮಾಡುವೆನು; ಇದು ನನ್ನ ಪ್ರತಿಜ್ಞೆ; ನನ್ನ ತಮ್ಮಂದಿರ ಮೇಲೆ ಆಣೆ" ಎಂದೂ ಹೇಳಿ ಲಕ್ಷ್ಮಣನಿಂದ ಸಮುದ್ರ ಜಲವನ್ನು ತರಿಸಿದನು. ಲಕ್ಷ್ಮಣನು ಶ್ರೀರಾಮನು ಆಜ್ಞೆಯಂತೆ ವಿಭೀಷಣನಿಗೆ ಅಭಿಷೇಕ ಮಾಡಿದನು. ವಿಭೀಷಣನೇ ಲಂಕೆಯ ಅಧಿಪತಿ ಎಂದು ಶ್ರೀರಾಮನು ಘೋಷಿಸಿದನು.

ಸಮುದ್ರ ದಾಟುವುದೇ ದೊಡ್ಡ ಸಮಸ್ಯೆಯಾಗಿತ್ತು. ವಿಭೀಷಣನು "ಈ ಸಮುದ್ರ ರಾಜನು ರಘುವಂಶದ ಭಗೀರಥನಿಂದ ಸಹಾಯ ಪಡೆದಿದ್ದಾನೆ. ಶ್ರೀರಾಮನು ಭಕ್ತಿಯಿಂದ ಸಮುದ್ರ ರಾಜನನ್ನು ಪ್ರಾರ್ಥಿಸಿ ದಾರಿ ಕೇಳುವುದು ಸರಿ" ಎಂದನು. ಶ್ರೀರಾಮನು ವಿಭೀಷಣನ ಮಾತನ್ನು ಒಪ್ಪಿದನು. ಸಮುದ್ರರಾಜನನ್ನು ಒಲಿಸಿಕೊಳ್ಳಲು ಧ್ಯಾನಿಸುತ್ತ ಮೂರು ಹಗಲು, ಮೂರು ರಾತ್ರಿಗಳನ್ನು ಕಳೆದನು; ಸಮುದ್ರರಾಜನಿಗೆ ಕರುಣೆ ಬರಲಿಲ್ಲ. ಅಚ್ಚರಿಯೆಂಬಂತೆ ಕೋಪಗೊಂಡ ಶ್ರೀರಾಮನು ತನ್ನ ಧನುಸ್ಸಿನಿಂದ ಘೋರ, ತೀಕ್ಷ್ಣ ಅಸ್ತ್ರಗಳನ್ನು ಹೂಡಿದನು. ದೇವತೆಗಳು ಹೆದರಿದರು. ರಾಮನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ಮಂತ್ರಿಸುವ ಹೊತ್ತಿಗೇ ಮೋಡಗಳು ಗುಡುಗಿದವು. ಘೋರ ಮಿಂಚಿನೊಡನೆ ಸಿಡಿಲು ಸಿಡಿಯಿತು. ಸಮುದ್ರರಾಜನು ಹೆದರಿ ಹತ್ತಾರು ಮೈಲು ಹಿಂದೆ ಸರಿದು ಗಂಗೆ, ಸಿಂಧು ಮೊದಲಾದ ನದಿ ದೇವತೆಗಳೊಂದಿಗೆ ಪ್ರತ್ಯಕ್ಷನಾದನು. ತನ್ನ ಕರ್ತವ್ಯವನ್ನು ಭಿನ್ನವಿಸಿಕೊಂಡು "ನಾನು ನಿನಗೆ ಸಮುದ್ರ ದಾಟಲು ಸಹಾಯ ಮಾಡುವೆನು. ಸೇತುವೆ ಕಟ್ಟುವಾಗ ನಾನು ಭೂಮಿಯಂತೆ ಗಟ್ಟಿಯಾಗುವೆನು. ನನ್ನ ಮೇಲೆ ಹಾಕುವ ವಸ್ತುಗಳನ್ನು ಮುಳುಗಿಸದೆ ತೇಲಿಸುವೆನು. ಅವೆಲ್ಲವನ್ನು ಹೊರುವೆನು. ವಿಶ್ವಕರ್ಮನ ಮಗನಾದ, ಕಪಿಶ್ರೇಷ್ಠ, ನಿರ್ಮಾಣ ತಜ್ಞನಾದ ನಳನು ನನ್ನ ಮೇಲೆ ವಿಶಿಷ್ಟ, ಉಪಯುಕ್ತ ಸೇತುವೆ ನಿರ್ಮಿಸಲಿ. ದೈವವೇ ನಿನ್ನಲ್ಲಿ ಇದೇ ನನ್ನ ಸವಿನಯ ಪ್ರಾರ್ಥನೆ" ಎಂದನು. ಒಪ್ಪಿದ ಶ್ರೀರಾಮನು ಬಿಲ್ಲಿಗೆ ಹೂಡಿದ ಬ್ರಹ್ಮಾಸ್ತ್ರವನ್ನು ಎಲ್ಲಿ ಪ್ರಯೋಗಿಸಲಿ ಎಂದು ಸಮುದ್ರರಾಜನನ್ನು ಕೇಳಿದನು. ಅವನ ಸಲಹೆಯಂತೆ ಉತ್ತರದ ದ್ರುಮಕಲ್ಪವೆಂಬ ಪುಣ್ಯಕ್ಷೇತ್ರಕ್ಕೆ ಗುರಿ ಇಟ್ಟು ಬಾಣ ಪ್ರಯೋಗಿಸಿ ಆ ಪುಣ್ಯಕ್ಷೇತ್ರವನ್ನು ಅಲ್ಲಿ ಸೇರಿಕೊಂಡಿದ್ದ ಧರ್ಮ ವಿರೋಧಿ ಜನದಿಂದ ಮುಕ್ತಗೊಳಿಸಿದನು.

ವಾನರ ಸೇನೆಯಿಂದ ಎದ್ದು ಬಂದ ನಳನಿಗೆ ವಾನರರು ಶ್ರೀರಾಮನ ಆಜ್ಞೆಯಂತೆ ನೆರವು ನೀಡಿದರು; ಸೇತುವೆಯು ಸಿದ್ಧವಾಯಿತು. ಸೇತುಬಂಧನದ ಕೆಲಸವು ಎಲ್ಲರಿಂದ ಉತ್ಸಾಹದಿಂದ ಪೂರ್ಣಗೊಂಡಿತು. ಶ್ರೀರಾಮನ ನಿರ್ದೇಶನದಲ್ಲಿ ಸೇತುವೆಯ ನೂರು ಯೋಜನ ೫ ದಿನಗಳಲ್ಲಿ ಪೂರ್ಣಗೊಂಡಿತು.

ಸೇತುವೆಯ ತುದಿಯನ್ನು ಲಂಕೆಯ ಸುವೇಲ ಪರ್ವತಕ್ಕೆ ಕೂಡಿಸಿದರು. ಹೀಗೆ ಎರಡೂ ದಂಡೆಗಳೂ ಬೆಸೆದುಕೊಂಡವು. ಶ್ರೀರಾಮಲಕ್ಷ್ಮಣರು ಸಮಾಧಾನಗೊಂಡರು. ನಂತರದ ಸಮಲೋಚನಾ ಸಭೆಗಳಲ್ಲಿ ಹಲವು ಯುದ್ಧ ಯೋಜನೆಗಳು ಚರ್ಚಿಸಲ್ಪಟ್ಟವು. ಶ್ರೀರಾಮನು ಸುಗ್ರೀವ, ಹನುಮಂತ, ಜಾಂಬವಂತ, ವಿಭೀಷಣರೊಡನೆ ಸಮಾಲೋಚಿಸಿ ಸೇನಾವ್ಯೂಹ ರಚಿಸಿದನು. ಸೇನೆಯ ಎದೆಯ ಭಾಗದಲ್ಲಿ ಅಂಗದನು, ನೀಲನೂ ಇರಲಿ, ಋಷಭನು ಈ ವ್ಯೂಹದ ದಕ್ಷಿಣದಲ್ಲಿರಲಿ, ನಾನೂ ಲಕ್ಷ್ಮಣನೂ ಸೇನೆಯ ಮುಂದೆ ಇರುತ್ತೇವೆ. ಸುಗ್ರೀವನು ಸೇನೆಯ ಹಿಂಭಾಗದಲ್ಲಿ ಇದ್ದು ಸೇನೆಯನ್ನು ರಕ್ಷಿಸಲಿ. ಜಾಂಬವಂತ, ವೇಗದರ್ಶಿ, ಸುಷೇಣ, ಮೊದಲಾದ ವೀರರು ಸೇನೆಯ ಮಧ್ಯಭಾಗದಲ್ಲಿರಲಿ. ವೇಗಶಾಲಿಯಾದ ಗಂಧಮಾದನ ಎಡಭಾಗದಲ್ಲಿ ಇರಲಿ ಎಂದು ಶ್ರೀರಾಮನು ಸೂಚಿಸಿದನು.

ಅತ್ತ ಲಂಕೆಯಲ್ಲಿ ರಾವಣನ ಮಾಂತ್ರಿಕತೆಯ ಹೆದರಿಕೆಗಳಿಗೆ ಒಳಗಾಗಬಾರದೆಂದು, ವಿಭೀಷಣ ಪತ್ನಿಯಾದ ಸರಮೆಯು ಸೀತೆಗೆ ಸಮಾಧಾನ ಪಡಿಸಿದಳು. ಹಾಗೆಯೇ ಶ್ರೀರಾಮನು ವಾನರ ಸೇನೆಯೊಂದಿಗೆ ಲಂಕೆಯ ಬಾಗಿಲಿಗೆ ಬಂದಿರುವುದನ್ನೂ ತಿಳಿಸಿದಳು. ಶ್ರೀರಾಮನು ರಾವಣನನು ವಧಿಸುವಳು ಎಂದೂ ಹೇಳಿದಳು.

ರಾವಣನ ಅಜ್ಜನಾದ ಮಾಲ್ಯವಂತನು ಬುದ್ಧಿವಂತನಾಗಿದ್ದನು. ಇವನೊಂದಿಗೆ ರಾವಣನ ತಾಯಿ ಕೈಕಸಿ ಹಾಗೂ ವೃದ್ಧ ಮಂತ್ರಿ ಅವಿದ್ಧ ಇವರೆಲ್ಲರೂ ಯುದ್ಧ ಬೇಡ; ಸೀತೆಯನ್ನು ಕಳುಹಿಸಿಕೊಡು ಎಂದು ಹೇಳಿದರು.

ರಾವಣನು ಕೇಳಿಸಿಕೊಳ್ಳಲೇ ಇಲ್ಲ. ಲಂಕೆಯ ರಕ್ಷಣೆಯ ಬಗ್ಗೆ ಯೋಚಿಸಿ ಪೂರ್ವದ್ವಾರದಲ್ಲಿ ಪ್ರಹಸ್ತನೂ, ಪಶ್ಚಿಮದಲ್ಲಿ ಇಂದ್ರಜಿತುವೂ, ಉತ್ತರದಲ್ಲಿ ತನ್ನೊಂದಿಗೆ ಶುಕ, ಸಾರಣರೂ, ದಕ್ಷಿಣದಲ್ಲಿ ಮಹಾ ಪಾರ್ಶ್ವ, ಮಹೋದರರೂ ಇರಬೇಕೆಂದು ನಿಯಮಿಸಿದನು. ವಿಭೀಷಣನ ಸಚಿವರ ಮೂಲಕ ವೈರಿರಾವಣನ ಸೇನಾಬಲ – ವ್ಯವಸ್ಥೆಗಳನ್ನು ತಿಳಿದ ಶ್ರೀರಾಮನು ತಕ್ಷಣವೇ ತನ್ನ ರಕ್ಷಣಾ ವ್ಯವಸ್ಥೆಯನ್ನು ಬದಲಿಸಿದನು. ಸ್ವತಃ ತಾನು ಲಕ್ಷ್ಮಣನೊಡನೆ ಉತ್ತರದಲ್ಲಿ ರಾವಣನನ್ನು ಎದುರಿಸಲು ನಿಂತನು. ಯುದ್ಧದ ಸಂದರ್ಭದಲ್ಲಿ ವಾನರರು ಮನುಷ್ಯ ರೂಪ ಧರಿಸುವಂತಿಲ್ಲ. ಶ್ರೀರಾಮ, ಲಕ್ಷ್ಮಣ, ವಿಭೀಷಣ ಮತ್ತು ನಾಲ್ವರು ಸಚಿವರು ಮಾತ್ರ ಮನುಷ್ಯ ರೂಪದಲ್ಲಿರುವುದಾಗಿ ತೀರ್ಮಾನಿಸಲಾಯಿತು. ಸುವೇಲ ಶಿಖರದ ತುದಿಯಿಂದ ಲಂಕೆಯನ್ನು ಶ್ರೀರಾಮ, ಲಕ್ಷ್ಮಣ, ಮತ್ತು ವಾನರರು ದಿಟ್ಟಿಸಿದರು. ಇಂದ್ರನ ಅಮರಾವತಿಯಂತೆ ಅದು ವೈಭವಯುತ ನಗರವಾಗಿತ್ತು. ಸ್ವಲ್ಪ ಸಮಯದ ನಂತರ ಸುಗ್ರೀವ ರಾವಣನ ನಡುವೆ ಭೀಕರ ಕಾಳಗ ನಡೆಯಿತು. ರಾವಣನು ಮಾಯಾತಂತ್ರವನ್ನು ಪ್ರಯೋಗಿಸತೊಡಗಿದಂತೆ ಕಂಡ ಕೂಡಲೇ ಸುಗ್ರೀವನು ಶ್ರೀ ರಾಮನಲ್ಲಿಗೆ ಬಂದು ಸೇರಿದನು.

ಸುವೇಲ ಶಿಖರದಿಂದ ಶ್ರೀರಾಮನು ಕೆಳಗಿಳಿದನು. ಅಂದೇ ಲಂಕೆಯನ್ನು ಆಕ್ರಮಿಸಲು ನಿರ್ಣಯಿಸಿದನು. ಶ್ರೀರಾಮನ ನಿರ್ದೇಶನದಂತೆ ವಾನರಸೇನೆಯು ರಾವಣನ ಲಂಕೆಯನ್ನು ಸುತ್ತಲೂ ಮುತ್ತಿತು. ಆದರೂ ಶ್ರೀರಾಮನು ರಾಜಧರ್ಮದಂತೆ ಅಂಗದನನ್ನು ರಾವಣನಲ್ಲಿಗೆ ದೂತನಾಗಿ ಕಳುಹಿಸಿದನು. ಸೀತೆಯನ್ನು ಒಪ್ಪಿಸಿ ಶರಣಾಗತನಾಗಬೇಕೆಂದು ಹೇಳಲು ಸೂಚಿಸಿದನು. ರಾಮನ ಸೂಚನೆಯನ್ನು ರಾವಣನ ಸಭೆಯಲ್ಲಿ ಅಂಗದನು ಮಂಡಿಸಿದನು. ಶ್ರೀರಾಮನ ಸಂದೇಶ ಕೇಳಿ ಕೋಪಗೊಂಡ ರಾವಣನು ಅಂಗದನನ್ನು ಕೊಲ್ಲಲು ತನ್ನ ಭಟರಿಗೆ ಆಜ್ಞೆ ಮಾಡಿದನು. ಆದರೆ ತಪ್ಪಿಸಿಕೊಂಡ ಅಂಗದನು 'ರಣಾಂಗಣದಲ್ಲಿ ಸಂಧಿಸೋಣ' ಎಂದು ಹೇಳಿ, ಹಾರಿ ಬಂದು ಶ್ರೀರಾಮನನ್ನು ಭೇಟಿ ಮಾಡಿ

ನಡೆದುದನ್ನು ವರದಿ ಮಾಡಿದನು. ನಂತರ ಶ್ರೀರಾಮನು ಯುದ್ಧವು ಅನಿವಾರ್ಯವೆಂದು ನಿರ್ಧರಿಸಿದನು; ವಾನರ ಯೋಧರೊಡನೆ ಸಮರಕ್ಕೆ ಸಜ್ಜಾದನು. ರಾಮ ಸೇನೆಯು ಲಂಕೆಗೆ ಲಗ್ಗೆ ಹಾಕಿತು. ರಾಕ್ಷಸರು ಹೆದರಿದರು. ವಾನರರ ರಣಘರ್ಜನೆ ರಾವಣ ಪುರಿಯಲ್ಲಿ ಮೊಳಗಿತು; ಸೀತೆಗೆ ಸಂತೋಷದ ಸಮಯ ಬಂದಿತೆನಿಸಿತು. ರಾವಣನ ಆದೇಶದಂತೆ ಲಂಕೆಯೊಳಗಿಂದ ಸೈನಿಕರು ನುಗ್ಗಿದರು. ಆನೆಗಳ ಘೀಂಕಾರ, ಕುದುರೆಗಳ ಹೇಷಾರವ, ರಥಗಳ ಚೀತ್ಕಾರ ಕೋಲಾಹಲವೆಬ್ಬಿಸಿತು. ಗದೆ, ತ್ರಿಶೂಲ, ಖಡ್ಗ, ತೋಮರ, ಪಟ್ಟಸ, ಮೊದಲಾದ ಮಾರಣಾಂತಿಕವಾದ ಆಯುಧಗಳನ್ನು ಹಿಡಿದು ರಾಕ್ಷಸರು ನುಗ್ಗಿದರು. ಪರಸ್ಪರ ಆಕ್ರಮಣ ಆರಂಭವಾಯಿತು. ರಕ್ತ ಮಾಂಸಗಳ ಚೆಲ್ಲಾಟದಿಂದ ಸಮರಾಂಗಣವು ಕೊಚ್ಚೆಯಾಯಿತು; ರಣದೇವತೆಗೆ ಊಟ ಬಡಿಸಿದಂತಿತ್ತು. ಯುದ್ಧ ನಡೆಯುತ್ತಿದ್ದ ಹಾಗೆಯೇ ಸೂರ್ಯಾಸ್ತವಾಯಿತು. ಅಂಗದನು ಇಂದ್ರಜಿತುವಿನ ರಥ, ಸಾರಥಿ, ಕುದುರೆಗಳನ್ನು ಭಗ್ನಗೊಳಿಸಿ ಬಡಿದುರುಳಿಸಿದನು. ಇಂದ್ರಜಿತುವು ಆಕಾಶಕ್ಕೆ ಹಾರಿ ಕಾಣದಾದನು. ಅಲ್ಲಿಂದ ಅವನು ರೋಷದಿಂದ ಸರ್ಪಾಸ್ತ್ರಗಳನ್ನು ಪ್ರಯೋಗಿಸಿದನು. ಶ್ರೀರಾಮಲಕ್ಷ್ಮಣರು ನಾಗಪಾಶದಲ್ಲಿ ಬಂಧಿತರಾದರು; ಪ್ರಜ್ಞೆಯು ತಪ್ಪಿತು. ರಾವಣನು ಮಗನಾದ ಇಂದ್ರಜಿತುವನ್ನು ಅಪ್ಪಿಕೊಂಡಾಡಿದನು. ಸುಗ್ರೀವ ಮೊದಲಾದವರಿಗೆ ಆತಂಕವಾಯಿತು. ಆದರೆ ವಿಭೀಷಣನು ಅವರನ್ನು ಸಮಾಧಾನಿಸಿ 'ಸತ್ಯ ಧರ್ಮಗಳಲ್ಲಿ ನಿರತರಾದವರಿಗೆ ಅಪಮೃತ್ಯುವು ಬರದು' ಎಂದು ಹೇಳಿದನು. ಇದ್ದಕ್ಕಿದ್ದಂತೆ ಪ್ರಚಂಡ ಬಿರುಗಾಳಿಯು ಬೀಸಿತು. ಆಕಾಶ ಮಾರ್ಗದಿಂದ ಗರುಡನು ಶ್ರೀರಾಮಲಕ್ಷ್ಮಣರಿದ್ದಲ್ಲಿಗೆ ಪ್ರದಕ್ಷಿಣಾಕಾರವಾಗಿ ಇಳಿಯುತ್ತಿದ್ದನು. ಆ ಹೊತ್ತಿಗೆ ರಾಮ ಲಕ್ಷ್ಮಣರನ್ನು ಬಂಧಿಸಿದ್ದ ಸರ್ಪಗಳು ಓಡಿ ಹೋದವು. ಶ್ರೀರಾಮಲಕ್ಷಣರು ಮೊದಲಿನಂತಾದರು. ಗರುಡನು ಆಕಾಶಕ್ಕೆ ಹಾರಿ ಹೋದನು. ವಾನರರು ಸಿಂಹನಾದ ಮಾಡಿದರು ಹರ್ಷಾತಿರೇಕದಿಂದ ಕುಣಿದು ಕುಪ್ಪಳಿಸಿದರು. ರಾವಣನ ಮುಖವು ಕೆಂಪಾಯಿತು. ಧೂಮ್ರಾಕ್ಷನನ್ನು ಶ್ರೀರಾಮನ ಸೇನೆಯ ವಿರುದ್ಧ ಕಳುಹಿಸಿದನು. ಧೂಮ್ರಾಕ್ಷನು ಬಾಣಗಳ ಮಳೆಗರೆದು ವಾನರಸೇನೆಯನ್ನು ಕಂಗೆಡಿಸಿದನು. ಆದರೆ ಹನುಮಂತನು ಬಂಡೆಯೊಂದನ್ನು ಎತ್ತಿ ಬೀಸಿದನು. ಧೂಮ್ರಾಕ್ಷನ ರಥವು ಮುರಿಯಿತು; ಕುದುರೆಗಳು ನೆಲಕ್ಕುರುಳಿದವು. ಹನುಮಂತ ಮತ್ತು ಅವನ ನಡುವೆ ನಡೆದ ಹೋರಾಟದಲ್ಲಿ ಧೂಮ್ರಾಕ್ಷನು ಸತ್ತು ಬಿದ್ದನು. ಹಾಗೆಯೇ ವಜ್ರ ದಂಷ್ಟ್ರ, ಅಕಂಪನ, ಪ್ರಹಸ್ತ, ಮೊದಲಾದ ರಾಕ್ಷಸ ವೀರರೂ ಧರೆಗುರುಳಿದರು.

ಕೊನೆಗೂ ಶ್ರೀರಾಮನ ಮುಂದೆ ರಾವಣನು ಕಾಣಿಸಿಕೊಂಡನು. ಅವನ ತೇಜಸ್ವಿ ರೂಪಕಂಡು ರಾಮನಿಗೂ ಅಚ್ಚರಿಯಾಯಿತು. ಇವನು ರಾಕ್ಷಸ ಚಕ್ರವರ್ತಿಯೇ ಹೌದು ಎಂದೂ ಶ್ರೀರಾಮನಿಗೆ ಅನ್ನಿಸಿತು. ಶ್ರೀರಾಮನಿಗೆ ಸೀತಾಪಹರಣದ ನೆನಪು ಕಾಡಿ ತನ್ನ ಕ್ರೋಧವನ್ನು ಅವನ ಮೇಲೆ ಪ್ರದರ್ಶಿಸಿದನು. ಆ ಹೊತ್ತಿಗೇ ವಾನರ ವೀರರಾದ ಗವಯ, ಗಲಾಕ್ಷ ಋಷಭ, ಜ್ಯೋತಿಯೆಂಬುವವರು ರಾವಣನ ಹಿಂಸೆಗೆ ಒಳಗಾಗಿ ಹೆದರಿ ಶ್ರೀರಾಮನಲ್ಲಿ ಶರಣಾದರು. ಹನುಮ ರಾವಣರ ಬಲಾಬಲಗಳ ಪ್ರದರ್ಶನವೂ ನಡೆಯಿತು. ಹಲವು ಏರಿಳಿತಗಳ ಆ ಹೋರಾಟದ ನಂತರ ರಾವಣನು ಹನುಮಂತನನ್ನು ಬಿಟ್ಟು ನೀಲನನ್ನು ಎದುರಿಸಿದನು. ಭಾರೀ ಹೋರಾಟದಲ್ಲಿ ನೀಲನು ಮೂರ್ಛಿತನಾದನು. ಲಕ್ಷ್ಮಣ ರಾವಣರಿಗೆ ನಡೆದ ಸಂಘರ್ಷವೂ ಭೀಕರವಾದುದೇ ಆಗಿತ್ತು. ಆದರೂ ರಾವಣನು ಬ್ರಹ್ಮನಿಂದ ಪಡೆದಿದ್ದ ಶಕ್ತ್ಯಾಯುಧವನ್ನು ಲಕ್ಷ್ಮಣನ ಮೇಲೆ ಪ್ರಯೋಗಿಸಿದನು. ಎಚ್ಚರ ತಪ್ಪಿದ ಸೌಮಿತ್ರಿಯನ್ನು ಎತ್ತಿಕೊಂಡು ಹೋಗಲು ರಾವಣನು ಪ್ರಯತ್ನಿಸಿದ್ದನ್ನು ವಿಫಲಗೊಳಿಸಿದ ಹನುಮಂತನು ಅವನನ್ನು ವಜ್ರ ಸಮಾನ ತನ್ನ ಮುಷ್ಟಿಯಿಂದ ಗುದ್ದಿ, ತತ್ತರಿಸುವಂತೆ ಮಾಡಿದನು. ಲಕ್ಷ್ಮಣನನ್ನು ಎತ್ತಿಕೊಂಡು ಶ್ರೀರಾಮನಿದ್ದಲ್ಲಿಗೆ ಬಂದನು. ಪುನಃ ರಾವಣನು ವಾನರ ಸೇನೆಯ ಮೇಲೆ ಬಿದ್ದು ಧ್ವಂಸ ಮಾಡತೊಡಗಿದಾಗ ಶ್ರೀರಾಮನೇ ಹನುಮಂತನ ಪ್ರಾರ್ಥನೆಯಂತೆ ಅವನ ಹೆಗಲನ್ನೇರಿ ರಾವಣನೊಂದಿಗೆ

ಮುಖಾಮುಖಿಯಾದನು. ರಾವಣನ ರಥ, ಚಕ್ರ, ಕುದುರೆ, ಧ್ವಜಸ್ತಂಭ, ಶ್ವೇತಛತ್ರ ಹಾಗೂ ರಾವಣನು ಪ್ರಯೋಗಿಸಿದ ಎಲ್ಲ ಅಸ್ತ್ರಗಳನ್ನೂ ತರಿದು ಹಾಕಿದನು. ಆತಂಕಗೊಂಡ ರಾವಣನ ಕಿರೀಟವನ್ನೂ ಅರ್ಧಚಂದ್ರಾಕೃತಿಯ ಬಾಣದಿಂದ ಕತ್ತರಿಸಿದ ಧೀರ ಶ್ರೀರಾಮನು 'ನೀನು ಇಂದು ದಣಿದಿರುವುದರಿಂದ ನಿನ್ನನ್ನು ಇಂದು ಸಂಹರಿಸುವುದಿಲ್ಲ; ನಾಳೆ ಬಾ' ಎಂದು ಹೇಳಿ ಕಳುಹಿಸಿಕೊಟ್ಟನು.

"ಮನುಷ್ಯರಿಂದಲೇ ನಿನಗೆ ಪ್ರಾಣ ಭಯವುಂಟು ಎಂದಿದ್ದ ಬ್ರಹ್ಮನ ಮಾತು ಸತ್ಯವಾಯಿತು. ಆ ಕಾಲ ಈಗ ಬಂದಿರಬಹುದೆ? ನಾನು ಈ ಹಿಂದೆ ಬಲಾತ್ಕರಿಸಿದ ವೇದವತಿಯೇ ಸೀತೆಯೇ?" ಎಂದು ರಾವಣನು ಚಿಂತಿಸಿದನು. ಯೋಚಿಸಿದ ನಂತರ ಕುಂಭಕರ್ಣನನ್ನು ನಿದ್ರೆಯಿಂದ ಎಚ್ಚರಿಸಿ ರಣಾಂಗಣಕ್ಕೆ ಅವನ ಆಶಯಕ್ಕೆ ವಿರುದ್ಧವಾಗಿ ಒತ್ತಾಯ ಪೂರ್ವಕವಾಗಿ ಕಳುಹಿಸಿದನು. ಕ್ರೋಧಗೊಂಡ ಸುಗ್ರೀವನು ಕುಂಭಕರ್ಣನಿಗೆ ಎದುರಾದನು. ಆ ಮುಖಾಮುಖಿಯಲ್ಲಿ ಮೂರ್ಛಿತನಾಗಿ ಬಿದ್ದ ಸುಗ್ರೀವನನ್ನು ಲಂಕೆಗೆ ಅಪಹರಿಸಿದನು. ಎಚ್ಚರಗೊಂಡ ಸುಗ್ರೀವನು ಕುಂಭಕರ್ಣನನ್ನು ತರಚಿ, ಪರಿಚಿ ಹಾರಿ ರಾಮನನ್ನು ಸೇರಿದನು. ಲಂಕೆಯನ್ನು ವಾನರರೂ ಮುತ್ತಿದರು. ಕೋಪದಿಂದ ಕುದಿಯುತ್ತಿದ್ದ ಕುಂಭಕರ್ಣನು ಮತ್ತೆ ರಣರಂಗಕ್ಕೆ ಹಿಂತಿರುಗಿದನು. ಶ್ರೀರಾಮ – ಕುಂಭಕರ್ಣರ ನಡುವೆ ಭೀಕರ ಕಾಳಗ ನಡೆಯಿತು. ಶ್ರೀರಾಮನ ವಾಯುವ್ಯಾಸ್ತ್ರ, ಐಂದ್ರಾಸ್ತ್ರ, ಅರ್ಧ ಚಂದ್ರಾಸ್ತ್ರ, ಮೊದಲಾದವುಗಳಿಂದ ಕುಂಭಕರ್ಣನು ಹತನಾದನು. ಮೃತ್ಯುವಿನ ಹಾದಿಯಲ್ಲಿ ಮತ್ತಷ್ಟು ರಾಕ್ಷಸರು ಬಲಿಯಾದರು. ರಾವಣನ ಮಕ್ಕಳಾದ ತ್ರಿಶಿರ, ನರಾಂತಕ ದೇವಾಂತಕ, ಅತಿಕಾಯರೂ ಇಲ್ಲವಾದರು. ಅತಿಕಾಯನೂ ಲಕ್ಷ್ಮಣನ ಬ್ರಹ್ಮಾಸ್ತ್ರಕ್ಕೆ ಅವಸಾನ ಗೊಂಡನು. ರಾವಣನು ದಿಗ್ಭ್ರಮೆಗೊಂಡನು. ಗೊಂದಲಗೊಂಡನು. ಮಗನಾದ ಮೇಘರಾಜನು ತಂದೆಯನ್ನು ಸಮಾಧಾನಿಸಿ "ನಾನು ಇಂದೇ ರಾಮಲಕ್ಷ್ಮಣರನ್ನು ಕೊಲ್ಲವೆನು" ಎಂದು ಹೇಳಿ, ರಾಕ್ಷಸರ ರಕ್ಷಣೆಯಲ್ಲಿ ಅಭಿಚಾರಿಕ ಹೋಮ ಮಾಡಿ ರಣರಂಗಕ್ಕೆ ಹೊರಟನು. ಅದೃಶ್ಯ ಶಕ್ತಿಯಿಂದ ಎಲ್ಲರನ್ನೂ ಕಂಗೆಡಿಸಿದನು. ಜಾಂಬವಂತ, ಸುಗ್ರೀವಾದಿಗಳನ್ನು ಮೂರ್ಛಿತರಾಗಿಸಿದನು. ಉಗ್ರ ಅಸ್ತ್ರಗಳನ್ನು ಸುರಿಸಿ ಶ್ರೀರಾಮಲಕ್ಷ್ಮಣರನ್ನು ಮೂರ್ಛಿತರಾಗಿಸಿದನು. ಲಂಕೆಯಲ್ಲಿ ರಾವಣನಿಗೆ ಸಂತೋಷವಾಯಿತು.

ಈ ನಡುವೆ ಮೂರ್ಛೆಯಿಂದೆದ್ದ ಜಾಂಬವಂತನು ಹನುಮಂತನಿಗೆ ನೀನೀಗಲೇ ಹಿಮಾಲಯಕ್ಕೆ ಹೋಗಿ ಅಲ್ಲಿನ ಋಷಭ – ಕೈಲಾಸಪರ್ವತಗಳ ಔಷಧಿ ಪರ್ವತ ಹುಡುಕು. ಅಲ್ಲಿ ಸತ್ತವರನ್ನು ಬದುಕಿಸುವ ಸಂಜೀವಿನಿ, ಮೈಯಲ್ಲಿ ನೆಟ್ಟ ಆಯುಧವನ್ನು ಕಿತ್ತು ಗುಣಪಡಿಸುವ ಮೂಲಿಕೆ ವಿಶಲ್ಯಕರಣಿ, ಗಾಯದ ಗುರುತಿಲ್ಲದೆ ಮೊದಲಿನ ಬಣ್ಣ ಬರಿಸುವ ಸಾವರ್ಣ್ಯಕರಣಿ, ಕತ್ತರಿಸಿದ ಅಂಗ, ಚರ್ಮಗಳನ್ನು ಗುಣಪಡಿಸಿ ಮೊದಲಿನಂತೆ ಕೂಡಿಸುವ ಸಂಧಾನ ಕರಣಿಗಳು ಇವೆ. ಇವುಗಳನ್ನು ತೆಗೆದುಕೊಂಡು ಬಾ' ಎಂದನು. ಹನುಮಂತನು ಕೂಡಲೇ ಹಿಮಾಲಯಕ್ಕೆ ಹಾರಿ ಅಲ್ಲಿಂದ ಔಷಧ ಪರ್ವತವನ್ನೇ ಎತ್ತಿಕೊಂಡು ಬಂದನು.

ಆ ಔಷಧ ಪರ್ವತ ಹತ್ತಿರವಾಗುತ್ತಿದ್ದಂತೆಯೇ ಅದರ ಸುಗಂಧವನ್ನು ಆಘ್ರಾಣಿಸಿದ ಕೂಡಲೇ ಶ್ರೀರಾಮ ಲಕ್ಷ್ಮಣರು ಎಚ್ಚರಗೊಂಡರು! ಆ ಔಷಧಿಗಳ ಚಿಕಿತ್ಸೆಯಿಂದ ಎಲ್ಲರ ಯಾತನೆ, ಗಾಯಗಳು ಮಾಯವಾದವು. ಹನುಮಂತನು ಪರ್ವತವನ್ನು ಪುನಃ ಹಿಮಾಲಯದಲ್ಲಿಟ್ಟು ಬಂದನು. ಅಂಗದನು ಅಕಂಪನನ್ನು ವಧಿಸಿದನು. ಸುಗ್ರೀವನು ಕುಂಭನನ್ನು ಕೊಂದನು. ನಿಕುಂಭನನ್ನು ಹನುಮಂತನು ಕೊಂದನು. ಖರನ ಮಗನಾದ

ಮಕರಾಕ್ಷನು ತನ್ನ ತಂದೆಯನ್ನು ಹತ್ಯೆಗೈದನೆಂಬ ಸಿಟ್ಟಿನಿಂದ ಶ್ರೀರಾಮನತ್ತ ನುಗ್ಗಿದನು. ಕೂಡಲೇ ಶ್ರೀರಾಮನ ಆಗ್ನೇಯಾಸ್ತ್ರಕ್ಕೆ ದಹಿಸಿಬಿದ್ದನು. ಈ ಎಲ್ಲ ಬೆಳವಣಿಗೆಗಳು ರಾವಣನನ್ನು ಕಂಗೆಡಿಸಿದವು.

ಭೀಕರವಾಗಿ ಮುನ್ನಡೆದ ಯುದ್ಧದಲ್ಲಿ ರಾವಣನು ಇಂದ್ರಜಿತುವನ್ನು ಕಳುಹಿಸಿಕೊಟ್ಟನು. ಅವನು ಮಾಯಾಯುದ್ಧದಿಂದ ರಾಮ ಲಕ್ಷ್ಮಣ ವಾನರರ ಮೇಲೆ ಬಾಣಗಳನ್ನು ಸುರಿಸಲು ಲಕ್ಷ್ಮಣನು ಕ್ರೋಧಗೊಂಡನು. ಈ ಯುದ್ಧದಲ್ಲಿ ವಿಜಯಿಯಾಗಲು ಇಂದ್ರಜಿತುವು ನಿಕುಂಭಿಕೆಯಲ್ಲಿ ಹೋಮ ಮಾಡುತ್ತಿದ್ದ ಸಂದರ್ಭದಲ್ಲಿ ವಿಭೀಷಣನ ಸಮ್ಮುಖದಲ್ಲಿಯೇ ಲಕ್ಷ್ಮಣನು ಅವನನ್ನು ಐಂದ್ರಾಸ್ತ್ರದಿಂದ ಸಂಹರಿಸಿದನು. ವೈದ್ಯ ಸುಷೇಣನು ಯುದ್ಧದಲ್ಲಿ ಗಾಯಗೊಂಡಿದ್ದ ಎಲ್ಲರನ್ನೂ ದಿವ್ಯ ಮೂಲಿಕೆಗಳಿಂದ ಉಪಚರಿಸಿದನು.

ಮರುದಿನದ ರಣಾಂಗಣದಲ್ಲಿ ರಾವಣನು ಭೀಕರವಾಗಿ ಕಾದಾಡಿದನು. ಸುಗ್ರೀವನು ವಿರೂಪಾಕ್ಷನನ್ನು, ಅಂಗದನು ಮಹಾಪಾರ್ಶ್ವನನ್ನು ಕೊಂದರು. ರಾವಣನು ಶ್ರೀರಾಮ ಲಕ್ಷ್ಮಣರತ್ತ ಹೊರಟನು.

ಮುಂದಿನ ಕದನದಲ್ಲಿ ರಾವಣನು ಶ್ರೀರಾಮನ ಮೇಲೆ ದ್ವೇಷ, ಆವೇಶಗಳಿಂದ ಹಲವು ಅಸ್ತ್ರಗಳನ್ನು ಪ್ರಯೋಗಿಸಿದನು. ವಿಭೀಷಣನನ್ನು ರಕ್ಷಿಸಲು ಅಡ್ಡ ಬಂದ ಲಕ್ಷ್ಮಣನು ರಾವಣನ ಮಹಾಶಕ್ತಿ ಎಂಬ ಆಯುಧಕ್ಕೆ ಮೂರ್ಛಿತನಾಗಿ ಬಿದ್ದನು. ಕ್ರೋಧೋದ್ದೀಪ್ತನಾದ ಶ್ರೀರಾಮನು ಕೋದಂಡ ಹಿಡಿದು ರಾವಣನ ಎದುರಿಗೆ ನಿಂತನು. ಅತಿಘೋರ ದಾಳಿಯಲ್ಲಿ ರಾವಣನು ಅಂಜಿ ಲಂಕೆಗೆ ಓಡಿದನು. ಮೂರ್ಛಿತನಾಗಿದ್ದ ಲಕ್ಷ್ಮಣನಲ್ಲಿಗೆ ಬಂದ ಶ್ರೀರಾಮನು, ಹನುಮಂತನಿಗೆ ಪುನಃ ಹಿಮಾಲಯದಿಂದ ಔಷಧೀಯ ಪರ್ವತ ತರಲು ಹೇಳಿದನು; ಹನುಮಂತನು ತಂದನು. ಸುಷೇಣನು ಆ ಔಷಧಗಳಿಂದ ಆಯ್ದು ಉಪಚರಿಸಿದನು. ಲಕ್ಷ್ಮಣನು ಎಚ್ಚರಗೊಂಡು ಎದ್ದು ಕುಳಿತನು.

ಮರುದಿನ ರಾವಣನು ಹೊಸ ರಥವೇರಿ ಶ್ರೀರಾಮನನ್ನು ಎದುರುಗೊಂಡನು. ಅತ್ಯುಗ್ರ ಕಾಳಗದಲ್ಲಿ ಶ್ರೀರಾಮನಿಂದ ರಾವಣನು ಸಂಹರಿಸಲ್ಪಟ್ಟನು; ರಾಮನ ಪ್ರತಿಜ್ಞೆಯು ಪೂರ್ಣಗೊಂಡಿತು.

ಹತನಾದ ದಶಾನನನನ್ನು ಕಂಡ ತಮ್ಮನಾದ ವಿಭೀಷಣ, ಮಡದಿ ಮಂಡೋದರಿಯರು ವಿಲಾಪಿಸಿದರು. ವಿಭೀಷಣನು ಶ್ರೀರಾಮನ ಸೂಚನೆಯಂತೆ ರಾವಣನ ಉತ್ತರಕ್ರಿಯೆಗಳನ್ನು ಮಾಡಿದನು. ವಿಭೀಷಣನ ಪಟ್ಟಾಭಿಷೇಕವೂ ಸಂತೋಷದ ಅತ್ಯಂತಿಕತೆ. ಸೀತೆಗೆ ಕಂಠ ಬಿಗಿದು ಮಾತೇ ಹೊರಡದಾಯಿತು. ಸೀತಾರಾಮರು ಮುಖಾಮುಖಿಯಾದರು. ಆದರೆ ಶ್ರೀರಾಮನು ಸೀತೆಯನ್ನು ಅಗ್ನಿಯಿಂದ ಎದ್ದು ಬಂದ ನಂತರ, ಅಗ್ನಿದೇವನ ಆಜ್ಞೆಯಂತೆ ಸ್ವೀಕರಿಸಿದನು. “ಉರಿಯುವ ಅಗ್ನಿಯೇ ಸೀತೆಯಾದರೂ ಲೋಕಾಪವಾದದ ಕಾರಣಕ್ಕಾಗಿ ನಾನು ಮನೋಯಾತನೆಯನ್ನು ಸಹಿಸಿಕೊಂಡೆ” ಎಂದು ಶ್ರೀರಾಮನು ಅಗ್ನಿಗೆ ಹೇಳಿದನು; ಸೀತೆಯನ್ನು ಕರೆದುಕೊಂಡನು. ವಿಭೀಷಣನ ಪುಷ್ಪಕ ವಿಮಾನದಲ್ಲಿ ಸೀತಾರಾಮ ಲಕ್ಷ್ಮಣರು ಕುಳಿತರು. ಎಲ್ಲರೂ ಅಯೋಧ್ಯೆಗೆ ಹೊರಟರು. ೧೪ ವರ್ಷಗಳ ಹಿಂದೆ ಸಿದ್ಧತೆಗಳು ಹೇಗೆ ನಡೆದಿದ್ದವೋ, ಹಾಗೆಯೇ ಎಲ್ಲ ಸಿದ್ಧತೆಗಳೂ ನಡೆದವು. ಶ್ರೀರಾಮನ ವೈಭವಯುತ ಪಟ್ಟಾಭಿಷೇಕ ವಿಧಿಗಳು ಪ್ರಾರಂಭವಾದವು. ಸೀತಾ



ಸಮೇತ ಶ್ರೀರಾಮನನ್ನು ರತ್ನಮಯ ಪೀಠದಲ್ಲಿ ಕುಳ್ಳಿರಿಸಿದರು. ವಸಿಷ್ಠ, ಜಾಬಾಲಿ, ಕಾಶ್ಯಪ, ಕಾತ್ಯಾಯನ, ಸುಯಜ್ಞ, ಗೌತಮ, ಮೊದಲಾದ ಮಹರ್ಷಿಗಳು ಶುದ್ಧ, ಸುಗಂಧ, ಪವಿತ್ರ ಜಲವನ್ನು ಶ್ರೀರಾಮನ ಶಿರಸ್ಸಿನ ಮೇಲೆ ಅಭಿಷಿಂಚಿಸಿದರು, ಕನ್ಯೆಯರು, ಮಂತ್ರಿಗಳು, ಯೋಧರು, ಪ್ರಜಾಪ್ರಮುಖರು ಸಂತೋಷದಿಂದ ಅಭಿಷೇಕ ಮಾಡಿದರು. ಎಲ್ಲ ದಿಕ್ಪಾಲಕರೂ, ದೇವತೆಗಳೂ ಬಂದು ದಿವ್ಯಔಷಧಗಳಿಂದ ಶ್ರೀರಾಮನಿಗೆ ಅಭಿಷೇಕ ಮಾಡಿದರು. ನಂತರ ಸುವರ್ಣ ಭೂಷಿತ, ಅಲಂಕೃತ, ನವರತ್ನ ಖಚಿತವಾದ ಸಿಂಹಾಸನವನ್ನು ರಾಜಸಭಾ ಮಂದಿರದಲ್ಲಿ ತಂದಿರಿಸಿದರು.

ಬ್ರಹ್ಮನು ನಿರ್ಮಿಸಿದ್ದ, ಮನು ಧರಿಸಿದ್ದ, ರತ್ನ ಶೋಭಿತ ದಿವ್ಯ ಕಿರೀಟವನ್ನು ವಸಿಷ್ಠರು ಶ್ರೀರಾಮಚಂದ್ರನ ಶಿರಸ್ಸಿನಲ್ಲಿಟ್ಟು ಪಟ್ಟಾಭಿಷೇಕ ವಿಧಿಯನ್ನು ಸಂಪನ್ನಗೊಳಿಸಿದರು. ಮಾರುತಿಗೆ ಋಣಿಯಾದ ಶ್ರೀರಾಮನು ಸೀತೆಯನ್ನೂ, ಸೀತೆಯು ಹನುಮಂತನನ್ನೂ ಸನ್ಮಾನಿಸಿದರು. ಭರತನು ಯುವರಾಜನಾದನು. ವಾಲ್ಮೀಕಿ ಮಹರ್ಷಿಗಳು ರಚಿಸಿದ ಶ್ರೀ ಮದ್ರಾಮಾಯಣವು ಭಾರತೀಯ ಮನಸ್ಸುಗಳಲ್ಲಿ ಎಂದೆಂದಿಗೂ ಜೀವಂತವಾಗಿರುವಂತ ಪುಣ್ಯ ಕಥಾನಕವೇ ಆಗಿದೆ. ಉತ್ತರ ಕಾಂಡದಲ್ಲಿ ರಾಮರಾಜ್ಯದಲ್ಲಿ, ಮಿಥ್ಯಾಪವಾದದ ಕೇಂದ್ರ ವ್ಯಕ್ತಿಯಾಗಿ ಸೀತೆಯು ಕಾಣಿಸಿಕೊಂಡಳು. ಇಕ್ಷ್ವಾಕು ವಂಶದ ಮರ್ಯಾದೆಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ, ಪ್ರಜೆಗಳನ್ನು ಕೌಟುಂಬಿಕ ಧರ್ಮದ ಪರಿಮಿತಿಯಲ್ಲಿರಿಸುವುದಕ್ಕಾಗಿ, ರಾಮನು ಸೀತೆಯನ್ನು ಕಾಡಿಗೆ ಕಳುಹಿಸಿಬಿಟ್ಟನು. ವಾಲ್ಮೀಕಿಯ ಆಶ್ರಯದಲ್ಲಿ ಸೀತೆಯ ಮಕ್ಕಳು ಲವಕುಶರು ಬೆಳೆದರು. ಸೀತೆಗೆ ತನ್ನ ಪತಿಯ ಕಷ್ಟಗಳು ಗೊತ್ತಿದ್ದುದರಿಂದ ಅವಳು ಸಂಪೂರ್ಣವಾಗಿ ಸಹಕರಿಸಿದಳು; ಕಹಿಯನ್ನು ಮನಸ್ಸಿನಲ್ಲಿ ಉಳಿಸಿಕೊಳ್ಳಲಿಲ್ಲ. ವಾಲ್ಮೀಕಿಯ ಶ್ರೀರಾಮನು ಅತ್ಯಂತ ಮಾನವೀಯನು. 'ಮರ್ಯಾದಾ ಪುರುಷೋತ್ತಮ', 'ವಿಗ್ರಹವಾನ್ ಧರ್ಮಃ' ಎಂಬ ಮಾತುಗಳು ಶ್ರೀರಾಮನಿಗಾಗಿಯೇ ಬರೆಯಲ್ಪಟ್ಟಿವೆ.




ಶ್ರೀರಾಮ ಲಕ್ಷ್ಮಣ ವಾನರ ಸೈನ್ಯ




ರಾವಣ, ಶೂರ್ಪಣಖಿ ಮೊದಲಾದ ಅಸುರರು


ಶ್ರೀರಾವಣ ಮೂರ್ತಿ
ರಾಮರಾವಣ ಯುದ್ಧದ ಸನ್ನಿವೇಶ
ಸೈನಿಕರು
ರಾವಣ
ಮರಣ
ಕುಂಭಕರ್ಣ
ಮಂಡೋದರಿ



ರೇಖಾ ರಾಮಾಯಣ


ಮಂಡೋದರಿ ಆದಿ ಸ್ತ್ರೀಯರು
ರಾವಣ ಮರಣ
ವಿಭೀಷಣ
ಗರುಡ
ಗಮನ ವಿಷ್ಣುವಿನ
ದರ್ಶನ
ಸುಗ್ರೀವ
ಮಾರುತಿ
ಗರುಡ


ತಾರಾ
ಸುಗ್ರೀವ
ಶ್ರೀರಾಮ
ಸೀತೆ
ಸೌಮಿತ್ರಿ
ವಿಭೀಷಣ




ಹನುಮಂತನು ಯುದ್ಧದ ಸಮಯದಲ್ಲಿ ರಾಮ ಲಕ್ಷ್ಮಣರನ್ನು ಆಕಾಶಮಾರ್ಗಕ್ಕೆ ಒಯ್ದದ್ದು


ಲಕ್ಷ್ಮಣ
ರಾಮ ವೈಭವ ಶ್ರೀವೀರರಾಮಮೂರ್ತಿ
ಷೋಡಶ ಕಲಾರಾಮ ಮೂರ್ತಿ
ಅಂಜನಾದೇವಿ




ಶತೃಘ್ನ
ಭರತ
ಲಕ್ಷ್ಮಣ
ಅಂಜನಾದೇವಿ
ಮಾರುತಿ
ಸೀತಾ







ಹನುಮಲಿಂಗ:
ರಾಮೇಶ್ವರ



ಶ್ರೀರಾಮ ಪಂಚಾಯತನ






ರೇಖಾ ರಾಮಾಯಣ



ಸುಮಿತ್ರಾ ಕೌಸಲ್ಯಾ ಪ್ರಲಾಪ
ರಾಮ
ಸೀತೆ
ಊರ್ಮಿಳಾ
ಲಕ್ಷ್ಮಣ
ಶತೃಘ್ನ
ಶೃತಿಕೀರ್ತಿ
ಗಂಧರ್ವ
ಪುಷ್ಪಕವಿಮಾನ
ಹಿಂದಕ್ಕೆ



ರೇಖಾ ರಾಮಾಯಣ


ಲವಕುಶರೊಂದಿಗೆ ಸೀತಾರಾಮರು
ಹನುಮತ್ ವೈಭವ


ಸುಮಂತ
ಅತ್ರಿ
ನಾರದ
ಕುಬೇರ
ವಸಿಷ್ಠರು
ಲಕ್ಷ್ಮಣ
ಊರ್ಮಿಳಾ
ಶ್ರೀರಾಮ
ಸೀತಾ


ತುಂಬುರ
ಇಂದ್ರ
ಮಾಂಡವ್ಯ
ಶತೃಘ್ನ
ಶೃತಿಕೀರ್ತಿ
ವಿಶ್ವಾಮಿತ್ರ
ಪ್ರಧಾನಿ
ಭರತ/
ಮಾಂಡವಿ


ಪುಷ್ಪಕವಿಮಾನ
ಹನುಮಂತ/ಅಂಗದರು

ಪದಸೂಚಿ

ದ

ಧ

ನ

ಪ

ಬ

ಭ

ಮ


ಯ

ರ

ಲ

ವ

ದೃಶ್ಯಕಲಾ ಇತಿಹಾಸ ಮತ್ತು ವಿಮರ್ಶೆ



೧೯೪೯ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಾಗಟ ಅಗ್ರಹಾರದಲ್ಲಿ ಜನಿಸಿದ ಕೆ.ವಿ. ಸುಬ್ರಹ್ಮಣ್ಯಂ ದೃಶ್ಯಕಲೆಯ ಇತಿಹಾಸ ವಿಮರ್ಶೆಗಳಿಗೆ ಸಂಬಂಧಿಸಿದ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದಾರೆ. ಕರ್ನಾಟಕದ ಆಧುನಿಕ ಶಿಲ್ಪಕಲೆ, (೧೯೯೪) ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ (೨೦೦೭), ಮೊದಲಾದ ಪುಸ್ತಕಗಳ ಲೇಖಕರು ಇವರು. 'ಇನ್‌ಸ್ಟಾಲೇಷನ್ ಕಲಾ ಪ್ರಪಂಚ' ಪುಸ್ತಕವು ಪುಸ್ತಕ ಪ್ರಾಧಿಕಾರದ ಪ್ರಶಸ್ತಿಗೆ ಪಾತ್ರವಾಗಿದೆ.

ಇವರಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ, ೧೯೯೯; United Writers Association of India, ಚೆನ್ನೈನ Fellow 2004; ಹರ್‍ಯಾಣದ ಸುಭದ್ರಾ ಕುಮಾರಿ ಚೌವ್ಹಾಣ್ ಜನ್ಮಶತಮಾನೋತ್ಸವ ಸಮ್ಮಾನ್, ೨೦೦೪; ಕರ್ನಾಟಕ ಚಿತ್ರಕಲಾ ಪರಿಷತ್ತಿನ ಜೀವಮಾನದ ಸಾಧನೆ ಪುರಸ್ಕಾರ, ೨೦೧೪, ಕಲಬುರಗಿಯ ಐಡಿಯಲ್ ಫೈನ್ ಆರ್ಟ್ಸ್ ಸಂಸ್ಥೆಯ 'ದೃಶ್ಯ ಭೂಷಣ' ಪ್ರಶಸ್ತಿ, ೨೦೧೪, ಬೆಂಗಳೂರು ಆರ್ಟ್ ಫೌಂಡೇಷನ್ನಿನ 'ಕಲಾಧ್ಯಾನ್' ಪುರಸ್ಕಾರ, ೨೦೧೫, ವಿ.ಸೀ. ಸಂಪದದ ಪುರಸ್ಕಾರ, ೨೦೧೬ ಮೊದಲಾದವು ಸಂದಿವೆ.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨
E-mail : shilpakala.academy@gmail.com
web : www.karnatakashilpakalaacademy.org
ದೂರವಾಣಿ : ೦೮೦-೨೨೨೭೮೭೨೫

